# ಪಠ್ಯಕ್ರಮ ಮತ್ತು ಬೋಧನೆಯ ಮೂಲ ತತ್ವಗಳು

ರಾಲ್ಫ್ ಡಬ್ಲ್ಯು ಟೈಲರ್

**ಪರಿಚಯ**

ಈ ಕಿರು ಪುಸ್ತಿಕೆಯಲ್ಲಿ ಒಂದು ಶೈಕ್ಷಣಿಕ ಸಂಸ್ಥೆಯ ಪಠ್ಯಕ್ರಮ ಮತ್ತು ಬೋಧನಾ ಕಾರ್ಯಕ್ರಮದ ವೀಕ್ಷಣೆ, ವಿಶ್ಲೇಷಣೆ ಮತ್ತು ವ್ಯಾಖ್ಯಾನಕ್ಕೆ ಅಗತ್ಯವಿರುವ ತಾರ್ಕಿಕಾಧಾರ ವಿವರಿಸಲು ಪ್ರಯತ್ನಿಸಲಾಗಿದೆ. ಒಂದು ಕೋರ್ಸ್ ಗೆ ಅಗತ್ಯವಾಗಿರುವ ಸಮಗ್ರ ಮಾರ್ಗದರ್ಶನ ಮತ್ತು ಸೂಕ್ತ ಪಠ್ಯಗಳನ್ನು ನೀಡುತ್ತಿಲ್ಲವಾದ್ದರಿಂದ ಇದು ಒಂದು ಪಠ್ಯ ಪುಸ್ತಕವಲ್ಲ. ಒಂದು ಶಾಲೆ ಅಥವಾ ಕಾಲೇಜು ಪಠ್ಯಕ್ರಮವನ್ನು ರಚಿಸಲು ಪ್ರಯತ್ನಿಸುತ್ತಿದ್ದರೆ ಅದರ ರೂಪುರೇಷೆಯನ್ನು ಅಥವಾ ಅದಕ್ಕೆ ತೆಗೆದುಕೊಳ್ಳಬೇಕಾದ ಕ್ರಮಗಳನ್ನು ವಿವರವಾಗಿ ವರ್ಣಿಸದೇ ಇರುವುದರಿಂದ ಇದೊಂದು ಕೈಪಿಡಿಯೂ ಅಲ್ಲ. ಶೈಕ್ಷಣಿಕ ಉಪಕರಣವಾಗಿ ಕಾರ್ಯ ನಿರ್ವಹಿಸುತ್ತಿರುವ ಬೋಧನಾ ಯೋಜನೆಯನ್ನು ಒಂದು ವಿಧಾನದಲ್ಲಿ ನೋಡುವ ರೀತಿಯನ್ನು ಈ ಪುಸ್ತಿಕೆಯಲ್ಲಿ ನಿರೂಪಿಸಲಾಗಿದೆ. ಒಂದು ಪರಿಣಾಮಕಾರೀ ಪಠ್ಯಕ್ರಮದಲ್ಲಿ ಇರುವ ಅಂಶಗಳು ಮತ್ತು ಸಂಬಂಧಗಳ ಕುರಿತಾಗಿ ವಿದ್ಯಾರ್ಥಿಗಳು ತಮ್ಮದೇ ಪರಿಕಲ್ಪನೆಗಳನ್ನು ಬೆಳೆಸಿಕೊಳ್ಳಲು ಇತರ ತಾರ್ಕಿಕಾಧಾರಗಳನ್ನು ಪರಿಶೀಲಿಸುವುದು ಉತ್ತಮ.

ಪಠ್ಯಕ್ರಮ ಮತ್ತು ಬೋಧನಾ ಯೋಜನೆಯನ್ನು ರಚಿಸಲು ಉತ್ತರ ಹುಡುಕಲೇ ಬೇಕಾದ ನಾಲ್ಕು ಮೂಲಭೂತ ಪ್ರಶ್ನೆಗಳನ್ನು ಮೊದಲಿಗೆ ಎತ್ತಿಕೊಂಡು ಇಲ್ಲಿನ ತಾರ್ಕಿಕಾಧಾರವನ್ನು ಬೆಳೆಸಲು ಪ್ರಾರಂಭಿಸಲಾಗಿದೆ. ಆ ಪ್ರಶ್ನೆಗಳು ಕೆಳಕಂಡಂತಿವೆ.

1. ಶಾಲೆ ತಾನು ಸಾಧಿಸಬೇಕೆಂದು ಅಪೇಕ್ಷೆ ಪಡಬೇಕಾದ ಶೈಕ್ಷಣಿಕ ಉದ್ದೇಶಗಳು ಯಾವುವು?
2. ಈ ಉದ್ದೇಶಗಳನ್ನು ಸಾಧಿಸುವ ನಿಟ್ಟಿನಲ್ಲಿ ಯಾವ ರೀತಿಯ ಶೈಕ್ಷಣಿಕ ಅನುಭವಗಳನ್ನು ನೀಡುವ ಸಾಧ್ಯತೆ ಇದೆ?
3. ಈ ಶೈಕ್ಷಣಿಕ ಅನುಭವಗಳ ಪರಿಣಾಮಕಾರಿ ಸಂಯೋಜನೆ ಹೇಗಿರಬೇಕು?
4. ಈ ಉದ್ದೇಶಗಳ ಸಾಧನೆ ಆಗುತ್ತಿದೆಯೇ ಎನ್ನುವುದನ್ನು ಹೇಗೆ ಖಚಿತಪಡಿಸಿಕೊಳ್ಳಬಹುದು?

ಮೇಲಿನ ಪ್ರಶ್ನೆಗಳಿಗೆ ಉತ್ತರ ಕಂಡುಹಿಡಿಯುವ ಮಾರ್ಗಗಳನ್ನು ಈ ಪುಸ್ತಿಕೆ ಸೂಚಿಸುತ್ತದೆ. ಒಂದು ಶೈಕ್ಷಣಿಕ ಮಟ್ಟದಿಂದ ಇನ್ನೊಂದಕ್ಕೆ ಹಾಗೂ ಒಂದು ಶಾಲೆಯಿಂದ ಇನ್ನೊಂದು ಶಾಲೆಗೆ ಉತ್ತರಗಳು ಸ್ವಲ್ಪ ಮಟ್ಟಿಗೆ ಬೇರೆ ಬೇರೆಯಾಗಿರುವುದರಿಂದ ಈ ಮೇಲೆ ಎತ್ತಿದ ಪ್ರಶ್ನೆಗಳಿಗೆ ಉತ್ತರ

ನೀಡುವ ಯಾವ ಪ್ರಯತ್ನವನ್ನೂ ಮಾಡಿಲ್ಲ. ಬದಲಿಗೆ, ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬಹುದಾದ ವಿಧಾನಗಳನ್ನು ವಿವರಿಸಲಾಗಿದೆ. ಪಠ್ಯಕ್ರಮ ಮತ್ತು ಬೋಧನೆಯ ಸಮಸ್ಯೆಗಳನ್ನು ಪರಿಶೀಲಿಸುವ ತಾರ್ಕಿಕಾಧಾರವನ್ನು ಇದು ಒಳಗೊಂಡಿದೆ.

1. ಶಾಲೆ ತಾನು ಸಾಧಿಸಬೇಕೆಂದು ಅಪೇಕ್ಷೆ ಪಡಬೇಕಾದ ಶೈಕ್ಷಣಿಕ ಉದ್ದೇಶಗಳು ಯಾವುವು?

ಅನೇಕ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಸ್ಪಷ್ಟವಾಗಿ ಗುರುತಿಸಿರುವ ಉದ್ದೇಶಗಳಿರುವುದಿಲ್ಲ. ಕೆಲವು ಸಂದರ್ಭಗಳಲ್ಲಿ ವಿಜ್ಞಾನ ಅಥವಾ ಇಂಗ್ಲಿಷ್ ಭಾಷೆ ಅಥವಾ ಸಮಾಜ ಅಧ್ಯಯನ ಅಥವಾ ಇನ್ಯಾವುದಾದರೂ ವಿಷಯದ ಶಿಕ್ಷಕರಿಗೆ ಶೈಕ್ಷಣಿಕ ಧ್ಯೇಯೋದ್ದೇಶಗಳ ಕುರಿತಾದ ಪ್ರಶ್ನೆಯನ್ನು ಕೇಳಬಹುದು. ಆದರೆ ಅದಕ್ಕೆ ತೃಪ್ತಿಕರವಾದ ಉತ್ತರ ದೊರಕುವುದಿಲ್ಲ. ಈ ಪ್ರಶ್ನೆಗೆ ಶಿಕ್ಷಕರು ಒಳ್ಳೆಯ ವಿದ್ಯಾವಂತ ವ್ಯಕ್ತಿಯನ್ನು ರೂಪಿಸುವ ಗುರಿ ಹೊಂದಿದ್ದೇವೆ ಎಂದು ಹೇಳಬಹುದು ಮತ್ತು ತಾವು ಬೋಧಿಸುತ್ತಿರುವ ವಿಷಯ - ಇಂಗ್ಲಿಷ್ ಭಾಷೆ ಅಥವಾ ಸಮಾಜ ಅಧ್ಯಯನ ಅಥವಾ ಮತ್ತೆ ಇನ್ಯಾವುದೋ ವಿಷಯವಾಗಿರಬಹುದು – ಅದು ಎಲ್ಲ ರೀತಿಯಲ್ಲಿಯೂ ಪರಿಪೂರ್ಣ ಶಿಕ್ಷಣಕ್ಕೆ ಆವಶ್ಯಕವಾಗಿರುವುದರಿಂದ ಅದನ್ನು ಬೋಧಿಸುತ್ತಿದ್ದೇವೆ ಎಂದು ಹೇಳಬಹುದು. ಹಲವು ಕಲಾತ್ಮಕ ಶಿಕ್ಷಕರು ಗುರಿಗಳ ಸ್ಪಷ್ಟ ಪರಿಕಲ್ಪನೆ ಇಟ್ಟುಕೊಳ್ಳಲಾರದೆಯೂ ಅತ್ಯುತ್ತಮವಾದ ಶೈಕ್ಷಣಿಕ ಕೆಲಸಗಳನ್ನು ಮಾಡುತ್ತಿದ್ದಾರೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ಉತ್ತಮ ಬೋಧನೆ ಅಂದರೆ ಏನು, ಯಾವ ಕಲಿಕಾ ಸಾಮಗ್ರಿಗಳು ಪರಿಣಾಮಕಾರಿಯಾಗಿರುವುದು, ಕಲಿಸುವುದಕ್ಕೆ ಯೋಗ್ಯವಾದ ವಿಷಯಗಳು ಯಾವುವು, ವಿಷಯ ವಸ್ತುವಿನ ಮಂಡನೆ ಯಾವ ರೀತಿ ಇರಬೇಕು ಮತ್ತು ವಿದ್ಯಾರ್ಥಿಗಳೊಡನೆ ಪರಿಣಾಮಕಾರಿಯಾಗಿ ವಿಷಯವನ್ನು ಬೆಳೆಸುವ ರೀತಿಗಳು ಯಾವುವು ಎನ್ನುವುದು ಇವರಿಗೆ ಅಂತರ್ಬೋಧನೆಯಿಂದಲೇ ತಿಳಿದಿರುತ್ತದೆ. ಆದಾಗ್ಯೂ, ಒಂದು ಶೈಕ್ಷಣಿಕ ಕಾರ್ಯಕ್ರಮವನ್ನು ಯೋಜಿಸ ಬೇಕಾದರೆ ಮತ್ತು ಸುಧಾರಣೆಗೆ ಸತತ ಪ್ರಯತ್ನ ಮಾಡಬೇಕಾದರೆ ಗುರಿಗಳ ಸ್ಪಷ್ಟ ಕಲ್ಪನೆ ಇರುವುದು ಬಹಳ ಮುಖ್ಯ. ಕಲಿಕಾ ಸಾಮಗ್ರಿಗಳ ಆಯ್ಕೆ, ವಿಷಯ ವಸ್ತುವಿನ ರೂಪುರೇಷೆ, ಬೋಧನಾ ವಿಧಾನದ ರಚನೆ, ಕಿರುಪರೀಕ್ಷೆ, ಪರೀಕ್ಷೆ ಸಿದ್ಧತೆಗಳಿಗೆಲ್ಲ ಈ ಕಲಿಕಾ ಧ್ಯೇಯೋದ್ದೇಶಗಳು ಮಾನದಂಡವಾಗಿರುತ್ತವೆ. ಪ್ರತೀ ಶೈಕ್ಷಣಿಕ ಕಾರ್ಯಕ್ರಮದ ಎಲ್ಲ ಅಂಶಗಳೂ ಮೂಲ ಶೈಕ್ಷಣಿಕ ಉದ್ದೇಶಗಳನ್ನು ಸಾಧಿಸುವ ಸಾಧನಗಳಷ್ಟೆ. ಆದ್ದರಿಂದ ನಾವು ಯಾವುದೇ ಶೈಕ್ಷಣಿಕ ಕಾರ್ಯಕ್ರಮವನ್ನು ಕ್ರಮಬದ್ಧವಾಗಿ ಮತ್ತು ಬುದ್ಧಿವಂತಿಕೆಯಿಂದ ಅಧ್ಯಯನ ಮಾಡುವುದಿದ್ದರೆ ಮೊದಲಿಗೆ ಅದರ ಶೈಕ್ಷಣಿಕ ಧ್ಯೇಯೋದ್ದೇಶಗಳನ್ನು ಖಚಿತವಾಗಿ ತಿಳಿದುಕೊಳ್ಳಬೇಕು.

ಆದರೆ ಈ ಧ್ಯೇಯೋದ್ದೇಶಗಳು ಹೇಗೆ ದೊರಕುತ್ತವೆ? ಧ್ಯೇಯೋದ್ದೇಶಗಳನ್ನು ಪ್ರಜ್ಞಾಪೂರ್ವಕವಾಗಿ ಇರಿಸಿಕೊಂಡ ಗುರಿಗಳು ಎಂದು ಹೇಳಬಹುದು. ಶಾಲಾ ಸಿಬ್ಬಂದಿಯ ಅಪೇಕ್ಷೆಗೆ ಅನುಗುಣವಾಗಿ ಅವರು ತಲುಪಬೇಕಾದ ಅಂತಿಮ ಗುರಿಯನ್ನು ಶೈಕ್ಷಣಿಕ ಧ್ಯೇಯೋದ್ದೇಶಗಳು ಎನ್ನುವುದಾದರೆ ಇವು ವ್ಯಕ್ತಿ ಅಥವಾ ಸಮೂಹಗಳ ವೈಯಕ್ತಿಕ ಒಲವಿನ ವಿಚಾರಗಳಷ್ಟೆ, ಅಲ್ಲವೇ? ಧ್ಯೇಯೋದ್ದೇಶಗಳು ಯಾವುವು ಎನ್ನುವ ಹುಡುಕಾಟ ನಡೆಸಬೇಕಾದ ಸಮಸ್ಯೆಯನ್ನು ಕ್ರಮಬದ್ಧವಾಗಿ ಪರಿಹರಿಸಿಕೊಳ್ಳಲು ಅವಕಾಶವಿದೆಯೇ?

ಕೊನೆಗೆ ಹೇಳಬೇಕೆಂದರೆ ಧ್ಯೇಯೋದ್ದೇಶಗಳು ಆಯ್ಕೆಯ ವಿಚಾರಗಳೇ ಆಗಿರುವುದು ಖಂಡಿತವಾಗಿಯೂ ಸತ್ಯ. ಹಾಗಾಗಿ, ಇವುಗಳನ್ನು ಶಾಲೆಯ ಜವಾಬ್ದಾರಿಯುತ ಸದಸ್ಯರು ದೀರ್ಘವಾಗಿ ಆಲೋಚಿಸಿ ತೆಗೆದುಕೊಳ್ಳುವ ಮೌಲ್ಯಯುತ ತೀರ್ಮಾನಗಳು (value judgements) ಎಂದು ಪರಿಗಣಿಸಬಹುದು. ಈ ತೀರ್ಮಾನಗಳನ್ನು ತೆಗೆದುಕೊಳ್ಳುವ ಸಲುವಾಗಿ ಮಾರ್ಗದರ್ಶನ ನೀಡಲು ಸಮಗ್ರ ಶೈಕ್ಷಣಿಕ ತತ್ವಶಾಸ್ತ್ರದ ಆವಶ್ಯಕತೆ ಇದೆ. ಜೊತೆಗೆ, ತಾತ್ವಿಕ ನೆಲೆಗಳನ್ನು ಅನ್ವಯಿಸಿ ಧ್ಯೇಯೋದ್ದೇಶಗಳ ಕುರಿತಾಗಿ ಬುದ್ಧಿವಂತಿಕೆಯಿಂದ ತೆಗೆದುಕೊಳ್ಳುವ ನಿರ್ಧಾರಗಳಿಗೆ ಕೆಲವು ರೀತಿಗಳ ಮಾಹಿತಿ ಮತ್ತು ಜ್ಞಾನ ಬಲವಾದ ಆಧಾರವನ್ನು ನೀಡುತ್ತದೆ. ನಿರ್ಧಾರ ತೆಗೆದುಕೊಳ್ಳುವವರಿಗೆ ಈ ವಾಸ್ತವಾಂಶಗಳು ಲಭ್ಯವಿದ್ದಲ್ಲಿ ಧ್ಯೇಯೋದ್ದೇಶಗಳ ಕುರಿತಾದ ಅವರ ತೀರ್ಮಾನಗಳು ವಿವೇಕದಿಂದ ಕೂಡಿರುವ ಸಂಭಾವ್ಯತೆ ಹೆಚ್ಚುತ್ತದೆ. ಆಗ ಶಾಲಾ ಧ್ಯೇಯೋದ್ದೇಶಗಳಿಗೆ ಹೆಚ್ಚಿನ ಮಹತ್ವ ಹಾಗೂ ಸಿಂಧುತ್ವ (validity) ಇರುತ್ತದೆ. ಈ ಕಾರಣಕ್ಕಾಗಿ, ಇತ್ತೀಚಿನ ಮೂರು ದಶಕಗಳಲ್ಲಿ ನಡೆದಿರುವ ವೈಜ್ಞಾನಿಕ ಎಂದು ಹೇಳಿಕೊಳ್ಳುವಂತಹ ಬಹುತೇಕ ಪಠ್ಯಕ್ರಮದ ಅಧ್ಯಯನಗಳು ಧ್ಯೇಯೋದ್ದೇಶಗಳನ್ನು ವಿವೇಚನೆಯಿಂದ ಆಯ್ಕೆ ಮಾಡಲು ಆಧಾರಗಳನ್ನು ಒದಗಿಸಬಹುದಾದ ಅನ್ವೇಷಣೆಗಳಾಗಿವೆ. ಪಠ್ಯಕ್ರಮ ಕ್ಷೇತ್ರಕ್ಕೆ ಸಂಬಂಧಿಸಿದ ತಾಂತ್ರಿಕ ಸಾಹಿತ್ಯದಲ್ಲಿ ಪಠ್ಯಕ್ರಮದ ಧ್ಯೇಯೋದ್ದೇಶಗಳನ್ನು ಆಯ್ಕೆ ಮಾಡುವ ಗುಂಪುಗಳಿಗೆ ಉಪಯುಕ್ತವಾಗುವ ಮಾಹಿತಿ ಸಂಗ್ರಹಿಸಿರುವ ನೂರಾರು ಅಧ್ಯಯನಗಳಿವೆ.

ಧ್ಯೇಯೋದ್ದೇಶಗಳ ಬಗ್ಗೆ ನಿರ್ಧಾರಗಳನ್ನು ತೆಗೆದುಕೊಳ್ಳಲು ಉಪಯುಕ್ತವಾದ ಮಾಹಿತಿ ಮತ್ತು ಜ್ಞಾನ ಇಂತಹ ಅನ್ವೇಷಣಾ ಅಧ್ಯಯನಗಳಿಂದ ದೊರೆಯುತ್ತದೆ ಎಂದು ಒಪ್ಪಿಕೊಂಡರೆ, ಈ ರೀತಿ ಉಪಯೋಗಕ್ಕೆ ಬರುವ ಮಾಹಿತಿಯನ್ನು ಕಲೆಹಾಕಲು ಸೂಕ್ತ ಆಕರಗಳು ಯಾವುವು ಎನ್ನುವ ಪ್ರಶ್ನೆ ಏಳುತ್ತದೆ. ಮೂಲಸಾರವಾದಿಗಳ (essentialists) ಮತ್ತು ಪ್ರಗತಿಪರರ (progressives) ನಡುವೆ, ವಿಷಯ ತಜ್ಞರು ಮತ್ತು ಮಕ್ಕಳ ಮನೋವಿಜ್ಞಾನಿಗಳ ನಡುವೆ, ವಿವಿಧ ಶಾಲಾ ಗುಂಪುಗಳ ನಡುವೆ ಯಾವ ಆಕರದಿಂದ ಧ್ಯೇಯೋದ್ದೇಶಗಳನ್ನು ಪಡೆಯಬೇಕು ಎನ್ನುವುದರ ಬಗ್ಗೆ ಸಾಕಷ್ಟು ವಾದ ನಡೆಯುತ್ತವೆ. ಪ್ರಗತಿಪರರು ಮಗುವನ್ನು ಅಧ್ಯಯನ ಮಾಡಿ ಅದರ ಮೂಲಕ ಮಗುವಿನ

ಆಸಕ್ತಿಗಳೇನು, ಮಗು ಎದುರಿಸುವ ಸವಾಲುಗಳೇನು, ಮಗುವಿನ ಗುರಿಗಳೇನು ಎನ್ನುವುದನ್ನು ಕಂಡು ಹಿಡಿಯುವುದರ ಕಡೆ ವಿಶೇಷವಾದ ಗಮನವನ್ನು ಹರಿಸುತ್ತಾರೆ. ಇದರಿಂದ ದೊರಕುವ ಮಾಹಿತಿಗಳು ಧ್ಯೇಯೋದ್ದೇಶಗಳ ಆಯ್ಕೆಗೆ ಮೂಲ ಆಕರ ಎಂದು ಪ್ರಗತಿಪರರು ಭಾವಿಸುತ್ತಾರೆ. ಇನ್ನೊಂದು ಕಡೆ, ಸಂಗ್ರಹವಾಗಿರುವ ಜ್ಞಾನಭಂಡಾರ ಅಥವಾ ಸಾಂಸ್ಕೃತಿಕ ಪರಂಪರೆಯನ್ನು ಮೂಲಸಾರವಾದಿಗಳು ಬಹಳವಾಗಿ ಮೆಚ್ಚಿಕೊಳ್ಳುತ್ತಾ, ಧ್ಯೇಯೋದ್ದೇಶಗಳನ್ನು ಪಡೆದುಕೊಳ್ಳಲು ಇದು ಪ್ರಮುಖ ಆಕರ ಎಂದು ಒತ್ತಿ ಹೇಳುತ್ತಾರೆ. ವಿಸ್ತೃತ ಸಾಂಸ್ಕೃತಿಕ ಪರಂಪರೆಯಿಂದ ಆಯ್ದುಕೊಳ್ಳಬಹುದಾದ ಮೂಲಭೂತ ಕಲಿಕಾಂಶಗಳೇ ಧ್ಯೇಯೋದ್ದೇಶಗಳೆಂದು ಮೂಲಸಾರವಾದಿಗಳ ಅಭಿಪ್ರಯ.

ಸಮಕಾಲೀನ ಸಮಾಜವನ್ನು ಕಾಡುತ್ತಿರುವ ಸಮಸ್ಯೆಗಳ ಬಗ್ಗೆ ಚಿಂತಿಸುವ ಸಮಾಜಶಾಸ್ತ್ರಜ್ಞರು ಹಾಗೂ ಇನ್ನಿತರರು ಪ್ರಸ್ತುತ ಸಮಾಜದ ವಿಶ್ಲೇಷಣೆ ಮಾಡಿ ಅದರಿಂದ ದೊರಕುವ ಮೂಲ ಮಾಹಿತಿಗಳಿಂದ ಧ್ಯೇಯೋದ್ದೇಶಗಳನ್ನು ಪಡೆದುಕೊಳ್ಳಬಹುದು ಎಂದು ಭಾವಿಸುತ್ತಾರೆ. ಸಮಕಾಲಿನ ಸಾಮಾಜಿಕ ಜೀವನವನ್ನು ಕಾಡುತ್ತಿರುವ ತೀವ್ರತರ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಯುವ ಜನಾಂಗಕ್ಕೆ ಸಹಾಯ ಮಾಡುವುದೇ ಶಾಲೆಯ ಕಾರ್ಯವೆನ್ನುವುದು ಇವರ ದೃಷ್ಟಿಕೋನ. ಪ್ರಸ್ತುತ ಸಮಸ್ಯೆಗಳೇನೆಂದು ಗುರುತಿಸಿದರೆ, ಆ ಸಮಸ್ಯೆಗಳನ್ನು ಬುದ್ಧಿವಂತಿಕೆಯಿಂದ ಪರಿಹರಿಸಿಕೊಳ್ಳಲು ಸಹಾಯಕವಾಗುವ ಜ್ಞಾನ, ಕೌಶಲಗಳು, ಮನೋಧೋರಣೆ ಮುಂತಾದವುಗಳನ್ನು ಒದಗಿಸುವುದೇ ಶಾಲೆಯ ಧ್ಯೇಯೋದ್ದೇಶಗಳಾಗುತ್ತವೆ. ಇನ್ನೊಂದು ಕಡೆ, ಶೈಕ್ಷಣಿಕ ತತ್ವಜ್ಞಾನಿಗಳು ಜೀವನದಲ್ಲಿ ಕೆಲವು ಮೂಲಭೂತ ಮೌಲ್ಯಗಳಿವೆ ಹಾಗೂ ಇವು ಶಿಕ್ಷಣದ ಮೂಲಕ ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ದಾಟಿಸಿಕೊಂಡು ಬರುತ್ತದೆ ಎನ್ನುವುದನ್ನು ಗುರುತಿಸುತ್ತಾರೆ. ತತ್ವಶಾಸ್ತ್ರದ ವ್ಯಾಪಕ ಅಧ್ಯಯನದಿಂದ ಅವಶ್ಯಕ ಮೌಲ್ಯಗಳನ್ನು ಪಡೆದುಕೊಂಡು, ಅವುಗಳನ್ನು ದಾಟಿಸುವುದು ಶಾಲೆಯ ಧ್ಯೇಯೋದ್ದೇಶ ಎನ್ನುವುದು ಇವರ ಕಾಣ್ಕೆ. ಆದ್ದರಿಂದ ಇವರು ಶೈಕ್ಷಣಿಕ ತತ್ವಶಾಸ್ತ್ರವನ್ನು ಧ್ಯೇಯೋದ್ದೇಶಗಳ ಮೂಲ ಆಕರ ಎಂದು ಪರಿಗಣಿಸುತ್ತಾರೆ.

ಈ ಕೋರ್ಸ್ ನಲ್ಲಿ ತೆಗೆದುಕೊಂಡಿರುವ ನಿಲುಮೆಯೇನೆಂದರೆ ಶಾಲಾ ಧ್ಯೇಯೋದ್ದೇಶಗಳ ಕುರಿತು ತಿಳುವಳಿಕೆ ಉಳ್ಳ ಮತ್ತು ಎಲ್ಲವನ್ನು ಒಳಗೊಂಡ ತೀರ್ಮಾನ ತೆಗೆದುಕೊಳ್ಳಲು ಯಾವುದೇ ಒಂದು ಮಾಹಿತಿಯ ಆಕರ ಸಾಕಾಗುವುದಿಲ್ಲ. ಪ್ರಸ್ತಾಪಿಸಿರುವ ಪ್ರತೀ ಆಕರದಲ್ಲಿಯೂ ಒಪ್ಪಬಹುದಾದ ಕೆಲವು ಮೌಲ್ಯಗಳಿವೆ. ಸಮಗ್ರವಾದ ಒಂದು ಪಠ್ಯಕ್ರಮ ಕಾರ್ಯಕ್ರಮವನ್ನು ರೂಪಿಸಲು ಪ್ರತಿಯೊಂದು ಆಕರವನ್ನೂ ಪರಿಗಣಿಸಬೇಕು. ಆದ್ದರಿಂದ ಈಗ ನಾವು ಈ ಆಕರಗಳ ಕಡೆ ನಮ್ಮ ಗಮನ ಹರಿಸಿ ಒಂದೊಂದರಲ್ಲೂ ಯಾವ ರೀತಿಯ ಮಾಹಿತಿಗಳನ್ನು ಪಡೆಯಬಹುದು

ಮತ್ತು ಗಮನಾರ್ಹ ಶೈಕ್ಷಣಿಕ ಧ್ಯೇಯೋದ್ದೇಶಗಳನ್ನು ಪಡೆಯಲು ಈ ಮಾಹಿತಿ ಯಾವ ರೀತಿಯ ಸಲಹೆಗಳನ್ನು ನೀಡುತ್ತವೆ ಎನ್ನುವುದನ್ನು ಪರಿಗಣಿಸೋಣ.

**ಶೈಕ್ಷಣಿಕ ಧ್ಯೇಯೋದ್ದೇಶಗಳ ಆಕರವಾಗಿ ಕಲಿಕಾರ್ಥಿಗಳ ಅಧ್ಯಯನಗಳು**

ಜನರ ವರ್ತನಾ ರೀತಿಗಳಲ್ಲಿ ಬದಲಾವಣೆಯನ್ನು ತರುವ ಪ್ರಕ್ರಿಯೆಯನ್ನು ಶಿಕ್ಷಣ ಎನ್ನಬಹುದು. ಇಲ್ಲಿ ವರ್ತನೆ ಎನ್ನುವ ಪದವನ್ನು ಬಾಹ್ಯ ಕ್ರಿಯೆಯ ಜೊತೆಗೆ ಚಿಂತನೆ ಮತ್ತು ಭಾವನೆಗಳನ್ನು ಒಳಗೊಂಡಿರುವ ವಿಸ್ತಾರವಾದ ಅರ್ಥದಲ್ಲಿ ಬಳಸಲಾಗಿದೆ. ಶಿಕ್ಷಣವನ್ನು ಈ ದೃಷ್ಟಿಕೋನದಲ್ಲಿ ನೋಡಿದಾಗ ಕಂಡುಬರುವುದೇನೆಂದರೆ, ಶೈಕ್ಷಣಿಕ ಸಂಸ್ಥೆಯು ತನ್ನ ವಿದ್ಯಾರ್ಥಿಗಳಲ್ಲಿ ತರಲು ಬಯಸುವ ವರ್ತನಾ ಬದಲಾವಣೆಗಳು ಶೈಕ್ಷಣಿಕ ಧ್ಯೇಯೋದ್ದೇಶಗಳನ್ನು ಪ್ರತಿನಿಧಿಸುತ್ತವೆ. ಸಂಸ್ಥೆಯೊಂದು ತನ್ನ ವಿದ್ಯಾರ್ಥಿಗಳಲ್ಲಿ ಆಪೇಕ್ಷಿಸುವ ವರ್ತನೆಗಳನ್ನು ಅವರಲ್ಲಿ ಉಂಟು ಮಾಡಲು ಕಲಿಕಾರ್ಥಿಗಳನ್ನೇ ಉದ್ದೇಶಿಸಿ ಕೈಗೊಂಡ ಅಧ್ಯಯನಗಳು ಅಗತ್ಯವಿರುವ ಬದಲಾವಣೆಗಳನ್ನು ಗುರುತಿಸಲು ಪ್ರಯತ್ನಿಸಬಹುದು.

ಒಂದು ಸಮುದಾಯದಲ್ಲಿನ ಪ್ರಾಥಮಿಕ ಶಾಲೆಯ ಮಕ್ಕಳ ವಿಷಯ ಕುರಿತು ಸಂಶೋಧನೆ ನಡೆಸಿದಾಗ ಅವರಿಗೆ ಪೌಷ್ಟಿಕಾಂಶಗಳ ಕೊರತೆ ಇದ್ದು ಶಾರೀರಿಕ ಸ್ವಾಸ್ಥ್ಯ ಇಲ್ಲದಿರುವುದು ತಿಳಿದುಬರಬಹುದು. ಈ ಅಂಶದಿಂದ ಆರೋಗ್ಯ ಶಿಕ್ಷಣ ಮತ್ತು ಸಮಾಜ ಅಧ್ಯಯನಕ್ಕೆ ಧ್ಯೇಯೋದ್ದೇಶಗಳು ದೊರಕಬಹುದಾದರೂ, ನಮಗೆ ಶಾರೀರಿಕ ಸ್ವಾಸ್ಥ್ಯದ ಕಲ್ಪನೆ ಅಥವಾ ಅಪೇಕ್ಷಿತ ಸ್ಥಿತಿ ತಿಳಿದಿದ್ದು ಅದನ್ನು ನಾವು ಪರಿಗಣಿಸಿದರೆ ಮಾತ್ರ ಧ್ಯೇಯೋದ್ದೇಶಗಳನ್ನು ಪಡೆಯಲು ಸಾಧ್ಯ. ಪೌಷ್ಟಿಕತೆಯ ಕೊರತೆಯನ್ನು ಸಹಜವೆಂದು ಒಪ್ಪಿಕೊಳ್ಳುವ ಸಮುದಾಯದಲ್ಲಿ ಈ ಮಾಹಿತಿಯಿಂದ ಯಾವುದೇ ಶೈಕ್ಷಣಿಕ ಧ್ಯೇಯೋದ್ದೇಶ ಸಿಗುವ ಸಂಭವ ಬಹಳ ಕಡಿಮೆ. ಇದೇ ರೀತಿ ಆರ್ಥಿಕ ಹಿಂಜರಿತ (depression) ಇದ್ದ ಸಮಯದಲ್ಲಿ ಹದಿಹರೆಯದವರರ ಕುರಿತಾದ ಅಧ್ಯಯನ ನಡೆಸಿದಾಗ ಅವರಲ್ಲಿ ಅನೇಕರಿಗೆ ಓದು ಮುಗಿದ ನಂತರ ಕೆಲಸ ಸಿಗುವುದರ ಬಗ್ಗೆ ಆತಂಕವಿದ್ದದ್ದು ತಿಳಿದು ಬಂದಿತು. ಹಾಗೆಂದು ಇವರಿಗೆ ವೃತ್ತಿಪರ ಮಾರ್ಗದರ್ಶನ ಅಥವಾ ಔದ್ಯೋಗಿಕ ಸಿದ್ಧತಾ ಕಾರ್ಯಕ್ರಮ ಕೊಡಬೇಕು ಎನ್ನುವ ಧ್ಯೇಯೋದ್ದೇಶವಿಟ್ಟುಕೊಳ್ಳಬೇಕು ಎಂದು ತಿಳಿಯಬೇಕಿಲ್ಲ. ಕಲಿಕಾರ್ಥಿಗಳ ಮಾಹಿತಿಯನ್ನು ಕೆಲವು ಅಪೇಕ್ಷಿತ ಮಾನಕಗಳೊಡನೆ ತುಲನೆ ಮಾಡಿದಾಗ ಹಾಗೂ ಒಪ್ಪಿತ ಗುಣಮಟ್ಟದ ಪರಿಕಲ್ಪನೆ ಇದ್ದಾಗಲಷ್ಟೇ ಕಲಿಕಾರ್ಥಿಯ ಪ್ರಸ್ತುತ ಪರಿಸ್ಥಿತಿ ಮತ್ತು ಒಪ್ಪಿತ ಗುಣಮಟ್ಟದಲ್ಲಿನ ವ್ಯತ್ಯಾಸ ತಿಳಿದುಬರುತ್ತದೆ. ಆಗ ಶೈಕ್ಷಣಿಕ ಧ್ಯೇಯೋದ್ದೇಶಗಳನ್ನು ಸೂಚಿಸಲು ಕಲಿಕಾರ್ಥಿಗಳ ಕುರಿತಾದ ಅಧ್ಯಯನಗಳಿಂದ

ಸಾಧ್ಯವಾಗುತ್ತದೆ. ಈ ವ್ಯತ್ಯಾಸ ಅಥವಾ ಗುರುತಿಸಿರುವ ಅಂತರವನ್ನು ಸಾಮಾನ್ಯವಾಗಿ ಅಗತ್ಯ ಎಂದು ಕರೆಯುತ್ತೇವೆ.

ಪ್ರೆಸ್ಕಾಟ್ (Prescott), ಮರೆ (Murray) ಮತ್ತು ಇತರರ ಮನೋವೈಜ್ಞಾನಿಕ ಬರಹಗಳಲ್ಲಿ "ಅಗತ್ಯ" ವೆನ್ನುವ ಪದವನ್ನು ವಿಭಿನ್ನ ಅರ್ಥದಲ್ಲಿ ಬಳಸಲಾಗುತ್ತದೆ. ಇವರು ಮಾನವನನ್ನು ಚೈತನ್ಯಶೀಲ ಜೀವಿಯಾಗಿ(dynamic organism), ಆಹಾರದ ಉತ್ಕರ್ಷಣದಿಂದ (oxidation) ಉತ್ಪನ್ನವಾದ ಆಂತರಿಕ ಬಲ ಮತ್ತು ಬಾಹ್ಯ ಸ್ಥಿತಿಗಳು ಸಾಮಾನ್ಯವಾಗಿ ಸಮತೋಲನದಲ್ಲಿರುವ ವ್ಯವಸ್ಥಿತ ಶಕ್ತಿಯನ್ನಾಗಿ ನೋಡುತ್ತಾರೆ. ಈ ವ್ಯವಸ್ಥೆ ಸಮತೋಲನದಲ್ಲಿರಲು ಕೆಲವು "ಅಗತ್ಯ"ಗಳ ಪೂರೈಕೆಯಾಗಬೇಕು. ಆದರೆ ಕೆಲವು ಕರ್ಷಣ ಅಥವಾ ಎಳೆತಗಳು (tension) ಸೃಷ್ಟಿಯಾಗಿ ಅವುಗಳ ಉಪಶಮನವಾಗದಿದ್ದಲ್ಲಿ ಅಸಮತೋಲನ ಉಂಟಾಗುತ್ತದೆ. ಅಂದರೆ ಪ್ರತಿ ಜೀವಿಯೂ ತನ್ನ ವ್ಯವಸ್ಥೆಯನ್ನು ಏರುಪೇರುಗೊಳಿಸುವ ಬಲಗಳನ್ನು ಉಪಶಮನಗೊಳಿಸುವ ರೀತಿಯಲ್ಲಿ ಪ್ರತಿಕ್ರಿಯಿಸುತ್ತಾ ನಿರಂತರವಾಗಿ ಅಗತ್ಯಗಳನ್ನು ಪೂರೈಸಿಕೊಳ್ಳುತ್ತಿರುತ್ತದೆ. ಈ ಪರಿಭಾಷೆಗೆ ಅನುಗುಣವಾಗಿ ಶಿಕ್ಷಣವನ್ನು ನೋಡಿದರೆ ಒಂದು ನೋಟ ಸಿಗುತ್ತದೆ. ಅದೇನೆಂದರೆ ಶಿಕ್ಷಣವು ಜೀವಿಯ ಅಗತ್ಯಗಳನ್ನು ಪೂರೈಸುವ ದಾರಿಗಳನ್ನು ಒದಗಿಸಿದಾಗ ಹೊರಹೊಮ್ಮುವ ವರ್ತನೆಯು ಸಾಮಾಜಿಕವಾಗಿ ಒಪ್ಪಿಗೆಯಾಗುವಂತಹದ್ದಿರಬೇಕು ಹಾಗೂ ಅದೇ ಸಮಯದಲ್ಲಿ ನಿರಂತರವಾದ, ಉಪಶಮನಗೊಳ್ಳಲಾರದ ಆತಂಕದಲ್ಲಿ ಜೀವಿಯು ಇರಬಾರದು. ಪ್ರೆಸ್ಕಾಟ್ ರವರು ಈ ಅಗತ್ಯಗಳನ್ನು ಮೂರು ರೀತಿಯದನ್ನಾಗಿ ವಿಂಗಡಿಸುತ್ತಾರೆ: ಭೌತಿಕ ಅಗತ್ಯಗಳಾದ ಆಹಾರ, ನೀರು, ಚಟುವಟಿಕೆ, ಸಂಭೋಗ ಇತ್ಯಾದಿ; ಸಾಮಾಜಿಕ ಅಗತ್ಯಗಳಾದ ಪ್ರೀತಿ, ಗುಂಪಿನ ಸದಸ್ಯತ್ವ, ಸಮಾಜದಿಂದ ಸ್ಥಾನಮಾನ ಅಥವಾ ಗೌರವದ ಅಪೇಕ್ಷೆ ಇತ್ಯಾದಿ, ಮತ್ತು ಬೆಸೆದುಕೊಳ್ಳುವ ಅಗತ್ಯ. ಅರ್ಥಾತ್ ತನ್ನನ್ನು ತನಗಿಂತ ಹಿರಿದಾದ ಮತ್ತು ತನ್ನನ್ನು ಮೀರಿದಂತಹ ಒಂದರೊಡನೆ ಸಂಬಂಧ ಕಲ್ಪಿಸಿಕೊಳ್ಳುವಂತಹ ಜೀವನದ ತಾತ್ವಿಕತೆಯ ಅಗತ್ಯ. ಈ ನೋಟದ ಪ್ರಕಾರ ಎಲ್ಲ ಮಕ್ಕಳ ಅಗತ್ಯಗಳೂ ಒಂದೇ ತರನಾಗಿರುತ್ತವೆ ಮತ್ತು ಆ ಅಗತ್ಯಗಳನ್ನು ಪೂರೈಸುವ ಜವಾಬ್ದಾರಿ ಶಾಲೆ ಹಾಗೂ ಪ್ರತಿಯೊಂದು ಸಾಮಾಜಿಕ ಸಂಸ್ಥೆಯ ಮೇಲಿರುತ್ತದೆ. ಅಗತ್ಯ ಪೂರೈಕೆ ಹೇಗಿರಬೇಕೆಂದರೆ ಅದು ತೃಪ್ತಿಕರವಾಗಿರುವುದಲ್ಲದೆ ವೈಯಕ್ತಿಕವಾಗಿ ಹಾಗೂ ಸಾಮಾಜಿಕವಾಗಿ ಮಹತ್ವವಿರುವ ವರ್ತನೆಯನ್ನೂ ಸಹ ಮೈಗೂಡಿಸಬೇಕು. ಈ ರೀತಿಯ ಅಗತ್ಯಗಳಿರುವ ಮಕ್ಕಳ ಗುಂಪೊಂದನ್ನು ಅಧ್ಯಯನ ಮಾಡಬೇಕೆಂದಿದ್ದರೆ ಸಮರ್ಪಕವಾಗಿ ಪೂರೈಕೆಯಾಗದಿರುವ ಅಗತ್ಯಗಳನ್ನು ಮೊದಲಿಗೆ ಗುರುತಿಸಿ, ನಂತರ ಆ ಅಗತ್ಯಗಳನ್ನು ಶಾಲೆ ಯಾವ ರೀತಿಯಲ್ಲಿ ಪೂರೈಸಬಹುದು ಎಂದು ಕಂಡುಕೊಳ್ಳುವುದನ್ನು ಒಳಗೊಂಡಿರಬೇಕು. ಮಕ್ಕಳ ಅಗತ್ಯಗಳನ್ನು ಸಮರ್ಪಕವಾಗಿ ಪೂರೈಸಲು ಆವಶ್ಯಕವಾದ ಕೆಲವು ರೀತಿಯ ಜ್ಞಾನ, ಮನೋಧೋರಣೆ, ಕೌಶಲಗಳು ಮುಂತಾದವುಗಳನ್ನು ಬೆಳೆಸುವ ಶೈಕ್ಷಣಿಕ ಧ್ಯೇಯೋದ್ದೇಶಗಳನ್ನು ಈ ಅಧ್ಯಯನಗಳು ಸೂಚಿಸುತ್ತವೆ. ಶಾಲೆಯ ಹೊರಗೆ

ಮಕ್ಕಳಿಗೆ ದೊರಕದಿರುವ ಮಾನಸಿಕ ಅಗತ್ಯಗಳನ್ನು ಪೂರೈಸಲು ಆಯೋಜಿಸುವ ಶಾಲಾ ಚಟುವಟಿಕೆಗಳಿಗೆ ಅರ್ಥ ಮತ್ತು ಪ್ರೇರೇಪಣೆ ಸಿಗುವ ಮಾರ್ಗಗಳನ್ನು ಸಹ ಈ ಅಧ್ಯಯನಗಳು ಸೂಚಿಸಬಲ್ಲವು.

**ಶಾಲೆಯ ಹೊರಗಿನ ಪ್ರಪಂಚದ ಸಮಕಾಲೀನ ಜೀವನ ಕುರಿತಾದ ಅಧ್ಯಯನಗಳು**

ಔದ್ಯಮಿಕ ಕ್ರಾಂತಿ ಹಾಗೂ ವಿಜ್ಞಾನದ ಹೊಸ ಹೊಸ ಆವಿಷ್ಕಾರಗಳಿಂದ ವಿಕಾಸಗೊಂಡ ಜ್ಞಾನದ ಭಂಡಾರ ಶಾಲೆಯ ಮೇಲಿನ ಒತ್ತಡವನ್ನು ಹೆಚ್ಚಿಸಿದವು. ಈ ಹೊರೆ ಶಾಲೆಯ ಮೇಲೆ ಬಿದ್ದು ಶಾಲೆಗಳಿಗೆ ಎಲ್ಲವನ್ನೂ ಸಾಧಿಸಬೇಕಾದ ಅನಿವಾರ್ಯತೆ ಹುಟ್ಟಿಕೊಂಡಿತು.ಈ ಸಮಸ್ಯೆಯನ್ನು ಎದುರಿಸಲು ಸಮಕಾಲೀನ ಜೀವನದ ಅಧ್ಯಯನಗಳಿಂದ ಧ್ಯೇಯೋದ್ದೇಶಗಳನ್ನು ಪಡೆಯಬಹುದೆನ್ನುವ ಚಿಂತನೆ ಹುಟ್ಟಿತು. ಇದಕ್ಕೆ ಮೊದಲು ತಾತ್ವಿಕ (ಅಕ್ಯಾಡೆಮಿಕ್ - academic) ಅಥವಾ ಅಧ್ಯಯನ ಯೋಗ್ಯವಾದದ್ದು ಎನ್ನುವ ಗೌರವ ಗಳಿಸಿಕೊಂಡಿದ್ದ ಜ್ಞಾನವು ಸಾಕಷ್ಟು ಕಡಿಮೆಯೇ ಇತ್ತು. ಆದ್ದರಿಂದ ಸಾಂಸ್ಕೃತಿಕ ಪರಂಪರೆಯಲ್ಲಿ ಮಹತ್ವವಾದ ಕೆಲವು ಅಂಶಗಳನ್ನು ಆಯ್ದುಕೊಳ್ಳಲು ಕಷ್ಟ ಎದುರಾಗಿರಲಿಲ್ಲ. ಆದರೆ ವಿಜ್ಞಾನದ ಆಗಮನದ ನಂತರ ಪ್ರತಿಯೊಂದು ತಲೆಮಾರಿನೊಂದಿಗೆ ಜ್ಞಾನವು ತ್ವರಿತಗೊಂಡು ಹೆಚ್ಚಾದ ಕಾರಣ ವಿದ್ವಾಂಸರಿಂದ ಒಪ್ಪಿತವಾದದನೆಲ್ಲವನ್ನು ಶಾಲೆಗಳು ತಮ್ಮ ಶೈಕ್ಷಣಿಕ ಕಾರ್ಯಕ್ರಮದಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಕೆಲವು ವಿಷಯಗಳ ಜ್ಞಾನ ಅಥವಾ ನಿರ್ದಿಷ್ಟ ಕೌಶಲ ಮತ್ತು ಸಾಮರ್ಥ್ಯಗಳು ಪ್ರಸಕ್ತ ಸಮಯದಲ್ಲಿ ಮಹತ್ವದ್ದೇ ಅಲ್ಲವೇ ಎನ್ನುವ ಪ್ರಶ್ನೆಯನ್ನು ಹೆಚ್ಚೆಚ್ಚು ಎತ್ತಲಾಗುತಿತ್ತು. ಹರ್ಬರ್ಟ್ ಸ್ಪೆನ್ಸರ್ (Herbert Spencer) ರವರು ,*What Knowledge Is of Most Worth?* (ವಾಟ್ ನಾಲೆಡ್ಜ್ ಇಸ್ ಆಫ್ ಮೋಸ್ಟ್ ವರ್ತ್?) ಎನ್ನುವ ಪ್ರಬಂಧದಲ್ಲಿ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಿದ್ದರು. ಕಳೆದ ಶತಮಾನದಲ್ಲಿನ ಅನೇಕ ಪ್ರಯತ್ನಗಳು ಈ ಸಮಸ್ಯೆಯನ್ನು ಇದೇ ರೀತಿಯಲ್ಲಿಯೇ ಎದುರಿಸಿವೆ. ಇದರಲ್ಲಿ ವ್ಯವಸ್ಥಿತ ಅಧ್ಯಯನಕ್ಕಿಂತ ಹೆಚ್ಚಾಗಿ ಅನೌಪಚಾರಿಕ ವೀಕ್ಷಣೆಯ ವ್ಯಾಖ್ಯಾನವಿದ್ದರೂ ಕೆಲವು ವಿಷಯಗಳಲ್ಲಿ ಇಂದಿನ ಸಂಶೋಧಕರು ಬಳಸುವ ತಂತ್ರಗಳನ್ನು ಹೋಲುವ ತಂತ್ರಗಳನ್ನೇ ಸ್ಪೆನ್ಸರ್ ರವರೂ ಬಳಸಿದ್ದರು.

ಮೊದಲನೇ ಮಹಾಯುದ್ಧದ ಸಮಯದಲ್ಲಿ ನುರಿತ ಕಸುಬುಗಳಲ್ಲಿ ಅಧಿಕ ಸಂಖ್ಯೆಯ ಜನರ ತರಬೇತಿಯ ಅಗತ್ಯವಿದ್ದು ಅದು ಅಲ್ಪಾವಧಿಯಲ್ಲಿಯೆ ನಡೆಯಬೇಕಿತ್ತು. ಆದರೆ ಆ ಅಗತ್ಯವನ್ನು ಹಳೆಯ ಮತ್ತು ನಿಧಾನ ಪ್ರವೃತ್ತಿಯ ಶಿಷ್ಯವೃತ್ತಿ (apprentice-ಅಪ್ರೆಂಟಿಸ್) ಪದ್ಧತಿಯು ಪೂರೈಸಲು ಅಸಮರ್ಪಕವಾಗಿತ್ತು. ನುರಿತ ಕಸುಬು ಮತ್ತು ವಿವಿಧ ರೀತಿಯ ತಂತ್ರಜ್ಞಾನಕ್ಕಾಗಿ ಜನರ ತರಬೇತಿಯನ್ನು ಚುರುಕುಗೊಳಿಸುವ ಸಲುವಾಗಿ ಕಸುಬು ವಿಶ್ಲೇಷಣೆ (job analysis) ಯ

ಕಲ್ಪನೆಯನ್ನು ಹುಟ್ಟುಹಾಕಿ ಮೊದಲನೆಯ ಮಹಾಯುದ್ಧದ ಸಮಯದಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಯೋಜಿಸಲು ವ್ಯಾಪಕವಾಗಿ ಬಳಸಲಾಯಿತು. ಇದರ ಸಾರಾಂಶವೇನೆಂದರೆ, ಯಾವುದೇ ಒಂದು ನಿರ್ದಿಷ್ಟ ಕ್ಷೇತ್ರದ ಕೆಲಸಗಾರನು ಮಾಡುವ ಕೆಲಸಗಳನ್ನು ವಿಶ್ಲೇಷಿಸಿ ಅವುಗಳಲ್ಲಿ ಕೆಲವನ್ನು ಮಾತ್ರ ಮುಖ್ಯ ಎಂದು ಗುರುತಿಸಿ, ನಂತರ ಗುರುತಿಸಿರುವ ಆ ಕೆಲಸದ ಮೇಲೆ ಮಾತ್ರ ಕೇಂದ್ರೀಕರಿಸಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಕ್ರಮವೇ ಕಸುಬಿನ ವಿಶ್ಲೇಷಣೆ. ಸಮಕಾಲೀನ ಜೀವನದ ಅಧ್ಯಯನಗಳಲ್ಲಿ ಬಹಳಷ್ಟು ಅಧ್ಯಯನಗಳು ಇದೇ "ತರ್ಕ"ವನ್ನು ಹೊಂದಿರುತ್ತವೆ.

ಶೈಕ್ಷಣಿಕ ಧ್ಯೇಯೋದ್ದೇಶಗಳಿಗೆ ಸಲಹೆಗಳನ್ನು ಪಡೆಯುವ ಸಲುವಾಗಿ ಸಮಕಾಲೀನ ಜೀವನವನ್ನು ವಿಶ್ಲೇಷಣೆ ಮಾಡಲು ಸಾಮಾನ್ಯವಾಗಿ ಎರಡು ರೀತಿಯ ವಾದಗಳನ್ನು ಮಂಡಿಸಲಾಗುತ್ತದೆ. ಮೊದಲನೆಯ ವಾದದಲ್ಲಿ ಹೇಳುವುದೇನೆಂದರೆ, ಸಮಕಾಲೀನ ಜೀವನವು ಬಹಳ ಸಂಕೀರ್ಣವಾಗಿದೆ ಹಾಗೂ ನಿರಂತರವಾಗಿ ಬದಲಾವಣೆಯಾಗುತ್ತಿದೆ. ಆದ್ದರಿಂದ ಐವತ್ತು ವರ್ಷಗಳ ಹಿಂದೆ ಮಹತ್ವವಿದ್ದ ವಿಷಯಗಳು ಇಂದಿಗೆ ಪ್ರಸ್ತುತವಲ್ಲದಿದ್ದರೆ ಅವುಗಳನ್ನು ಕಲಿಯುವುದರಿಂದ ವಿದ್ಯಾರ್ಥಿಗಳ ಸಮಯ ವ್ಯರ್ಥವಾಗುತ್ತದೆ. ಜೊತೆಗೆ ಅವರಿಗೆ ಈ ಹೊತ್ತು ಪ್ರಸ್ತುತತೆ ಇರುವ ವಿಷಯಗಳನ್ನು ಕಲಿಸುವುದನ್ನು ಕಡೆಗಾಣಿಸಬೇಕಾಗುತ್ತದೆ. ಪರಿಣಾಮವಾಗಿ ಇಂದಿನ ಜೀವನಕ್ಕೆ ಅವರನ್ನು ಶಾಲೆ ಸಿದ್ಧಪಡಿಸುವುದಿಲ್ಲ. ಹಾಗಾಗಿ ನಮ್ಮ ಶೈಕ್ಷಣಿಕ ಪ್ರಯತ್ನಗಳು ಈ ಸಂಕೀರ್ಣ ಜೀವನದ ಗಂಭೀರ ವಿಷಯ ಹಾಗೂ ಪ್ರಸ್ತುತವಾಗಿ ಮಹತ್ವವಿರುವ ಅಂಶಗಳ ಮೇಲೆ ಕೇಂದ್ರೀಕೃತವಾಗುವುದು ಅತೀ ಆವಶ್ಯಕ.

ಕಲಿಕೆಗಳ ಅನ್ವಯಿಕೆ (transfer of training- ಟ್ರಾನ್ಸ್ಫರ್ ಆಫ್ ಟ್ರೇನಿಂಗ್) ಕುರಿತಾದ ಅಧ್ಯಯನಗಳಿಂದ ತಿಳಿದುಬಂದಿರುವ ಅಂಶಗಳನ್ನು ಆಧರಿಸಿ ಸಮಕಾಲೀನ ಜೀವನದ ಅಧ್ಯಯನದ ಪರವಾಗಿರುವ ಇರುವ ಎರಡನೇ ವಾದ ಹುಟ್ಟುತ್ತದೆ. ವಿದ್ಯಾರ್ಥಿಯ ಬುದ್ಧಿ ಶಕ್ತಿ ಮತ್ತು ಸ್ವಾಭಾವಿಕವಾದ ವಿವಿಧ ಬೌದ್ಧಿಕ ಸಾಮರ್ಥ್ಯಗಳನ್ನು ವಿಶಾಲವಾಗಿ ಯೋಚಿಸಲು ಕಲಿಸಬಹುದಾದರೆ ಅವನು ಈ ಬೌದ್ಧಿಕ ಸಾಮರ್ಥ್ಯಗಳನ್ನು ಸೂಕ್ತ ಸಂದರ್ಭಗಳಲ್ಲಿ ಸಮರ್ಪಕವಾಗಿ ಬಳಸುತ್ತಾನೆ ಎಂದು ಶಿಕ್ಷಣತಜ್ಞರು ನಂಬಿದ್ದರು. ಈ ನಂಬಿಕೆ ಗಟ್ಟಿಯಾಗಿರುವವರೆಗೂ ಧ್ಯೇಯೋದ್ದೇಶಗಳನ್ನು ಸೂಚಿಸಲು ಸಮಕಾಲೀನ ಜೀವನದ ಅಧ್ಯಯನದ ಅಗತ್ಯ ಅಷ್ಟಾಗಿ ಕಂಡುಬರುವುದಿಲ್ಲವೆಂದು ನಂಬಿದ್ದರು. ಈ ದೃಷ್ಟಿಕೋನಕ್ಕೆ ಅನುಗುಣವಾಗಿ ವಿದ್ಯಾರ್ಥಿಯಲ್ಲಿ ಅನೇಕ ವಿಧದ ಬೌದ್ಧಿಕ ಸಾಮರ್ಥ್ಯಗಳನ್ನು ವಿಸ್ತರಿಸುವುದು ಶೈಕ್ಷಣಿಕ ಧ್ಯೇಯೋದ್ದೇಶವಾಗಿತ್ತು. ವಿದ್ಯಾರ್ಥಿಯ ಜೀವನ ಅನಾವರಣಗೊಂಡಂತೆ ಅವನು ಯಾವುದೇ ಸನ್ನಿವೇಶವನ್ನು ಎದುರಿಸಲು ತನ್ನಲ್ಲಿ ಅಭಿವೃದ್ಧಿ ಹೊಂದಿರುವ ತನ್ನ ವಿಸ್ತಾರಗೊಂಡ ಬೌದ್ಧಿಕ ಸಾಮರ್ಥ್ಯವನ್ನು ಬಳಸಿಕೊಳ್ಳುತ್ತಾನೆ

ಎನ್ನುವ ನಂಬಿಕೆ ಈ ದೃಷ್ಟಿಕೋನ ಹೊಂದಿರುವವರಿಗೆ ಇತ್ತು. ಆದರೆ, ಕಲಿಕೆಗಳ ಅನ್ವಯಕ್ಕೆ (ಟ್ರಾನ್ಸ್ಫರ್ ಆಫ್ ಟ್ರೇನಿಂಗ್) ಸಂಬಂಧಪಟ್ಟ ಅಧ್ಯಯನಗಳು ಕಲಿಕಾದಾರನು ತನ್ನ ಕಲಿಕೆಯಾದ ಸಂದರ್ಭ ಮತ್ತು ಜೀವನದಲ್ಲಿ ಎದುರಾದ ಪ್ರಸಂಗಗಳಲ್ಲಿ ಸಾಮ್ಯತೆಯನ್ನು ಗುರುತಿಸಿದಾಗ ಮಾತ್ರ ತನ್ನ ಕಲಿಕೆಯನ್ನು ಅನ್ವಯಿಸುತ್ತಾನೆ ಎಂದು ಸೂಚಿಸಿದವು. ಇದಕ್ಕೂ ಹೆಚ್ಚಾಗಿ ನಿಜ ಜೀವನದ ಸನ್ನಿವೇಶ ಮತ್ತು ಕಲಿಕಾ ಸಂದರ್ಭಗಳ ನಡುವೆ ಇರುವ ಸಾಮ್ಯತೆಯನ್ನು ಕಲಿಕಾದಾರ ಗ್ರಹಿಸುವ ಸಾಧ್ಯತೆ ಇರುವುದು ಎರಡು ಮಾನದಂಡಗಳನ್ನು ಪೂರೈಸಿದಾಗ ಮಾತ್ರ  ಎಂದು ಸೂಚಿಸಿತು . ಅವು ಯಾವುವೆಂದರೆ (1) ನಿಜ ಜೀವನದ ಸನ್ನಿವೇಶ ಮತ್ತು ಕಲಿಕಾ ಸನ್ನಿವೇಶಗಳಲ್ಲಿ ಅನೇಕ ವಿಧಗಳ ಸಾಮ್ಯತೆ ಇದ್ದಾಗ ಮತ್ತು (2) ಉದಾಹರಣೆ ಅಥವಾ ನಿದರ್ಶನಗಳ ಮೂಲಕ ಶಾಲೆಯಲ್ಲಿ ಕಲಿತದ್ದನ್ನು ನಿಜ ಜೀವನದಲ್ಲಿ ಅನ್ವಯಿಸಬಹುದಾದ ಸಂದರ್ಭಗಳನ್ನು ಹುಡುಕಲು ವಿದ್ಯಾರ್ಥಿಗೆ ಅಭ್ಯಾಸ ಮಾಡಿಸಿದಾಗ.  ಸಮಕಾಲೀನ ಜೀವನದ ವಿಶ್ಲೇಷಣೆ ಮಾಡಿ ಅದು ನೀಡುವ ಅವಕಾಶ ಮತ್ತು ಸಂದರ್ಭಗಳಿಗೆ ಸಂಬಂಧ ಕಲ್ಪಿಸಲು ಸಾಧ್ಯವಾಗುವಂತಹ ಕಲಿಕಾ ಧ್ಯೇಯೋದ್ದೇಶಗಳನ್ನು ಶಾಲೆಗಾಗಿ ಗುರುತಿಸುವುದರ ಸಾರ್ಥಕತೆಯನ್ನು ಸಮರ್ಥಿಸಿಕೊಳ್ಳಲು ಈ ಫಲಿತಾಂಶಗಳನ್ನು ಆಧಾರವಾಗಿ ಬಳಸಲಾಗುತ್ತದೆ.

ಕಲಿಕಾ ಧ್ಯೇಯೋದ್ದೇಶಗಳನ್ನು ಪಡೆಯಲು ಸಮಕಾಲೀನ ಜೀವನವನ್ನು ಆಧಾರವಾಗಿಟ್ಟುಕೊಳ್ಳುವುದರ ಬಗ್ಗೆ ಅದರಲ್ಲೂ ಸಮಕಾಲೀನ ಜೀವನವೊಂದೇ ಶಾಲೆಯ ಕಲಿಕಾ ಧ್ಯೇಯೋದ್ದೇಶಗಳ ಆಧಾರವಾದಾಗ ಅದರ ಬಗ್ಗೆ ಹೆಚ್ಚಿನ ಟೀಕೆಗಳಿವೆ.  ಇದರಲ್ಲಿ ಪದೇ ಪದೇ ಹೇಳುವುದೇನೆಂದರೆ ಸಮಕಾಲೀನ ಜೀವನದ ಆಗುಹೋಗುಗಳನ್ನು ಗುರುತಿಸಿದ ಮಾತ್ರಕ್ಕೆ ಅವು ಅಪೇಕ್ಷಣೀಯವಾಗುವುದಿಲ್ಲ. ಉದಾಹರಣೆಗೆ, ಕೆಲವು ಕಾರ್ಯಗಳಲ್ಲಿ ಹೆಚ್ಚು ಜನ ತೊಡಗಿಕೊಂಡಿದ್ದಾರೆ ಎಂದ ಮಾತ್ರಕ್ಕೆ ಆ ಕಾರ್ಯಗಳನ್ನು ಶಾಲೆಯಲ್ಲಿ ಕಲಿಸಬೇಕೆಂದು ಭಾವಿಸುವ ಅಗತ್ಯವಿಲ್ಲ. ಇವುಗಳಲ್ಲಿ ಕೆಲವು ಕೆಡಕನ್ನು ಸಹ ಉಂಟುಮಾಡುತ್ತಿರಬಹುದು. ಅಂತಹ ಸಂದರ್ಭದಲ್ಲಿ ಅದನ್ನು ಕಲಿಸುವ ಬದಲು ನಿವಾರಿಸುವುದರ ಕಡೆ ಶಾಲೆ ಗಮನ ಕೊಡಬೇಕಾದ ಆವಶ್ಯಕತೆ ಇರಬಹುದು.  ಎರಡನೆಯ ರೀತಿಯ ಟೀಕೆಯನ್ನು ಮೂಲಸಾರವಾದಿಗಳು ಮಾಡುತ್ತಾರೆ.  ಅವರು ಸಮಕಾಲೀನ ಜೀವನದ ಅಧ್ಯಯನಗಳನ್ನು "ವರ್ತಮಾನವಾದ"ದ ಪ್ರತಿಪಾದನೆಯೆಂದು ಕರೆಯುತ್ತಾರೆ. ಜೀವನ ನಿರಂತರವಾಗಿ ಬದಲಾಗುತ್ತಿರುತ್ತದೆ. ವಿದ್ಯಾರ್ಥಿಗಳಿಗೆ ಈ ಹೊತ್ತಿನ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಸಿದ್ಧತೆ ಮಾಡಿಕೊಡಬಹುದು. ಆದರೆ ಅವರು ವಯಸ್ಕರಾಗುವ ವೇಳೆಗೆ ಸಮಸ್ಯೆಗಳು ಬದಲಾಗಿರುತ್ತವೆ. ಬದಲಾದ ಸಮಸ್ಯೆಗಳನ್ನು ಎದುರಿಸಲು ಅವರು ಅಸಮರ್ಥರಾಗಿರುತ್ತಾರೆ ಎನ್ನುವುದು ಈ ಟೀಕಾಕಾರರ ವಾದ.  ಕೆಲವು ಪ್ರಗತಿಪರರು ಮೂರನೇ ರೀತಿಯ ಟೀಕೆಯನ್ನು ಮಾಡುತ್ತಾರೆ. ಸಮಕಾಲೀನ ಜೀವನದ ಮಹತ್ವದ ಸಮಸ್ಯೆಗಳು ಮತ್ತು ವಯಸ್ಕರು ತೊಡಗಿಕೊಳ್ಳುವ ಸಾಮಾನ್ಯ

ಚಟುವಟಿಕೆಗಳು ಮಕ್ಕಳಿಗೆ ಆಸಕ್ತಿಕರವಾಗಿರುವುದಿಲ್ಲ ಮತ್ತು ಅವುಗಳು ಅವರಿಗೆ ಸೂಕ್ತವೂ ಆಗಿರುವುದಿಲ್ಲ. ಆದರೆ ಇವುಗಳು ಯಾವುದೇ ಒಂದು ವಯಸ್ಸಿನ ಮಕ್ಕಳಿಗೆ ಶೈಕ್ಷಣಿಕ ಧ್ಯೇಯೋದ್ದೇಶಗಳಾಗಬೇಕು ಎಂದು ಭಾವಿಸುವುದರಿಂದ ಮಕ್ಕಳ ಆಸಕ್ತಿ ಮತ್ತು ಅಗತ್ಯಗಳ ಆಧಾರಕ್ಕೆ ಅನುಗುಣವಾಗಿ ಧ್ಯೇಯೋದ್ದೇಶಗಳನ್ನು ಪಡೆಯುವುದರ ಮಹತ್ವವನ್ನು ಕಡೆಗಾಣಿಸಿದಂತೆ ಆಗುವುದು.

ಸಮಕಾಲೀನ ಜೀವನದ ಅಧ್ಯಯನಗಳನ್ನಷ್ಟೇ ಆಧಾರವಾಗಿರಿಸಿಕೊಂಡು ಧ್ಯೇಯೋದ್ದೇಶಗಳನ್ನು ಪಡೆದುಕೊಂಡಾಗ ಮಾತ್ರ ಈ ಟೀಕೆಗಳೆಲ್ಲಾ ಅನ್ವಯವಾಗುವುದು. ಸಮಕಾಲೀನ ಜೀವನದಿಂದ ಧ್ಯೇಯೋದ್ದೇಶಗಳನ್ನು ಪಡೆದುಕೊಂಡು ಅದನ್ನು ಒಪ್ಪಿತವಾದ ಶೈಕ್ಷಣಿಕ ತತ್ವಶಾಸ್ತ್ರದ ದೃಷ್ಟಿಯಿಂದ ಬೇರೆ ಆಕರಗಳೊಂದಿಗೆ ಹೋಲಿಸಿ ಪರಿಶೀಲಿಸಿದರೆ ಮೊದಲ ಟೀಕೆಯು ಅನ್ವಯಿಸುವುದಿಲ್ಲ. ಕೆಲವು ಕ್ಷೇತ್ರಗಳ ಮಹತ್ವ ಒಂದು ಕಾಲಕ್ಕೆ ಮುಗಿಯದೆ ಕಾಲಾನುಕಾಲಕ್ಕೆ ಮುಂದುವರಿಯುತ್ತಿರುವಂತೆ ಭಾಸವಾಗುತ್ತದೆ. ಅಂತಹ ಕ್ಷೇತ್ರಗಳ ಸಮಕಾಲೀನ ಜೀವನದ ಅಧ್ಯಯನಗಳನ್ನು ಆಧಾರವಾಗಿಸಿಕೊಂಡು ಅದರೊಳಗಿನ ಮಹತ್ವದ ಕ್ಷೇತ್ರಗಳನ್ನು ಗುರುತಿಸಿ, ವಿದ್ಯಾರ್ಥಿಗಳು ಶಾಲೆಯಲ್ಲಿ ಕಲಿಯುವುದನ್ನು ನಿಜ ಜೀವನದಲ್ಲಿ ಉಪಯೋಗಿಸಲು ಅವಕಾಶಗಳನ್ನು ಹೊಂದಿರುವ ಕ್ಷೇತ್ರಗಳನ್ನು ಸೂಚಿಸಬಹುದು. ಜೊತೆಗೆ ಈ ಕ್ಷೇತ್ರದ ಮೂಲ ತತ್ವಗಳನ್ನು ವಿದ್ಯಾರ್ಥಿಗಳು ಜಾಣತನದಿಂದ ಅರ್ಥೈಸಿಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನಗಳನ್ನು ಮಾಡುವುದರ ಮೂಲಕ "ವರ್ತಮಾನವಾದ"ದ ಪ್ರತಿಪಾದನೆ ಎನ್ನುವ ವಾದವನ್ನು ತಳ್ಳಿಹಾಕಬಹುದು. ಕೊನೆಯದಾಗಿ, ಸಮಕಾಲೀನ ಜೀವನದ ಅಧ್ಯಯನಗಳು ಹಲವು ವಿಸ್ತೃತ ಶೈಕ್ಷಣಿಕ ಧ್ಯೇಯೋದ್ದೇಶಗಳಿಗೆ ದಿಕ್ಸೂಚಿಯಾದರೆ, ನಿರ್ದಿಷ್ಟ ಗುಂಪಿನ ಮಕ್ಕಳ ವಯೋಮಾನಕ್ಕೆ ಸೂಕ್ತವಾದ ಅಂಶಗಳನ್ನು ಗಮನದನಲ್ಲಿರಿಸಿಕೊಂಡು ಅವರ ಆಸಕ್ತಿ ಅಗತ್ಯಗಳನ್ನು ಪರಿಗಣಿಸಿ, ನಿರ್ದಿಷ್ಟ ಧ್ಯೇಯೋದ್ದೇಶಗಳನ್ನು ಅವರಿಗಾಗಿ ಪಡೆಯಬಹುದು. ಆಗ ಆ ಒಂದು ವಯೋಮಾನದ ಮಕ್ಕಳಿಗೆ ಸೂಕ್ತ ಹಾಗೂ ಸಂಬದ್ಧ ಮಾನದಂಡಗಳನ್ನು ಖಚಿತವಾಗಿ ಇರಿಸಿಕೊಳ್ಳಬಹುದು. ಆದ್ದರಿಂದ ಸಂಭಾವ್ಯ ಶೈಕ್ಷಣಿಕ ಧ್ಯೇಯೋದ್ದೇಶಗಳನ್ನು ಪಡೆಯಲು ಸಮಕಾಲೀನ ಜೀವನದ ಅಧ್ಯಯನಗಳಿಂದ ದೊರಕುವ ದತ್ತಾಂಶಗಳನ್ನು ಒಂದು ಆಕರವಾಗಿ ಬಳಸಿಕೊಳ್ಳುವುದು ಒಳ್ಳೆಯದು.

**ವಿಷಯ ತಜ್ಞರಿಂದ ಧ್ಯೇಯೋದ್ದೇಶಗಳಿಗೆ ಸಲಹೆಗಳು**

ಎಲ್ಲ ಶಾಲೆಗಳು ಮತ್ತು ಕಾಲೇಜುಗಳಲ್ಲಿ ಸರ್ವೇಸಾಮಾನ್ಯವಾಗಿ ವಿಷಯ ತಜ್ಞರೇ ಉದ್ದೇಶಗಳ ಆಕರವಾಗಿರುತ್ತಾರೆ. ಶಾಲೆ ಮತ್ತು ಕಾಲೇಜು ಪಠ್ಯಪುಸ್ತಕಗಳನ್ನು ವಿಷಯ ತಜ್ಞರೇ ಬರೆಯುತ್ತಾರೆ

ಹಾಗೂ ಇದರಲ್ಲಿ ಅವರ ದೃಷ್ಟಿಕೋನಗಳೇ ಬಿಂಬಿತವಾಗಿರುತ್ತದೆ. ಶಾಲೆ ಮತ್ತು ಕಾಲೇಜುಗಳ ಸದಸ್ಯರು ರಚಿಸುವ ಅಧ್ಯಯನ ವಿಷಯಗಳ ರೂಪುರೇಷೆಗಳಲ್ಲಿಯೂ ವಿಷಯ ತಜ್ಞರ ಪಾತ್ರವಿರುತ್ತದೆ. ಶಾಲೆಗಳು ಯಾವ ಧ್ಯೇಯೋದ್ದೇಶಗಳ ಸಾಫಲ್ಯತೆಗೆ ಪ್ರಯತ್ನಿಸುತ್ತವೋ ಆ ಧ್ಯೇಯೋದ್ದೇಶಗಳು ವಿಷಯ ತಜ್ಞರ ಪರಿಕಲ್ಪನೆಗಳನ್ನು ಪ್ರತಿನಿಧಿಸುತ್ತವೆ. ಶತಮಾನದ ತಿರುವಿನಲ್ಲಿ ಹೊರಬಂದ ಹತ್ತರ ಸಮಿತಿಯ (Committee of Ten) ವರದಿಗಳು ಕನಿಷ್ಠ 25 ವರ್ಷಗಳ ಕಾಲ ಅಮೇರಿಕದ ಪ್ರೌಢ ಶಿಕ್ಷಣವನ್ನು ದೊಡ್ಡ ರೀತಿಯಲ್ಲಿ ಪ್ರಭಾವಿಸಿತ್ತು. ಈ ವರದಿಗಳನ್ನು ವಿಷಯ ತಜ್ಞರುಸಿದ್ಧಪಡಿಸಿದ್ದರು. ಇವುಗಳಲ್ಲಿ ವ್ಯಕ್ತವಾದ ಧ್ಯೇಯೋದ್ದೇಶಗಳನ್ನು ಸಾವಿರಾರು ಪ್ರೌಢಶಾಲೆಗಳು ತಮ್ಮ ಗುರಿಯನ್ನಾಗಿಸಿಕೊಂಡವು.

ವಿಷಯ ತಜ್ಞರು ಸೂಚಿಸುವ ಧ್ಯೇಯೋದ್ದೇಶಗಳು ಅತಿಯಾಗಿ ತಾಂತ್ರಿಕ ಮತ್ತು ವಿಶೇಷವಾಗಿ ವಿಷಯ ಕೇಂದ್ರಿತವಾಗಿರುತ್ತದೆ ಹಾಗೂ ಇನ್ನೂ ಅನೇಕ ರೀತಿಗಳಲ್ಲಿ ಬಹಳಷ್ಟು ವಿದ್ಯಾರ್ಥಿಗಳಿಗೆ ಅಸಮಂಜಸವಾಗಿರುತ್ತದೆ ಎನ್ನುವ ಕಾರಣಗಳಿಂದ ಅನೇಕರು ವಿಷಯ ತಜ್ಞರನ್ನು ಬಳಸಿಕೊಳ್ಳುವ ಕುರಿತಾಗಿ ಟೀಕಿಸಿದ್ದಾರೆ. ಬಹುಶಃ ವಿಷಯ ತಜ್ಞರು ಈ ಹಿಂದೆ ಸೂಚಿಸಿರುವ ಅನೇಕ ಧ್ಯೇಯೋದ್ದೇಶ ಪಟ್ಟಿಗಳು ಅಸಮರ್ಪಕವಾಗಿರಲು ಮೂಲ ಕಾರಣ ಅವರ ಮುಂದಿಟ್ಟ ಪ್ರಶ್ನೆಗಳು ಅಸ್ಪಷ್ಟವಾಗಿದ್ದಿರಬಹುದು. ಹತ್ತರ ಸಮಿತಿಯ ಸದಸ್ಯರು ತಮ್ಮ ಮುಂದಿರುವ ಈ ಪ್ರಶ್ನೆಯನ್ನು ಸರಿಯಾಗಿ ಉತ್ತರಿಸುತ್ತಿದ್ದರೆಂದು ಅಭಿಪ್ರಾಯಪಟ್ಟಿದ್ದರೆಂದು ಸ್ಪಷ್ಟವಾಗಿ ಗೋಚರವಾಗುತ್ತದೆ: ಮುಂದೆ ತಾವು ಈ ಕ್ಷೇತ್ರದಲ್ಲಿ ಹೆಚ್ಚು ಉನ್ನತ ಕೆಲಸ ಮಾಡಬೇಕೆಂದುಕೊಳ್ಳುವ ವಿದ್ಯಾರ್ಥಿಗಳಿಗೆ ಪ್ರಾಥಮಿಕ ಹಂತದಲ್ಲಿ ಏನನ್ನು ಕಲಿಸಬೇಕು? ಉದಾಹರಣೆಗೆ, ಇತಿಹಾಸದ ವರದಿಯನ್ನು ತೆಗೆದುಕೊಂಡಾಗ ಅದರಲ್ಲಿರುವ ಧ್ಯೇಯೋದ್ದೇಶಗಳು ಇತಿಹಾಸಕಾರರಾಗಲು ತರಬೇತಿ ಪಡೆಯುವವರಿಗೆ ಆರಂಭಿಕ ಹಂತದ ಕೋರ್ಸ್ ನ ಧ್ಯೇಯೋದ್ದೇಶಗಳಂತೆ ಇವೆ. ಅದೇ ರೀತಿ ಗಣಿತದ ವರದಿಯು ಗಣಿತಜ್ಞರಾಗಲು ತರಬೇತಿ ಪಡೆಯುವವರಿಗೆ ಆರಂಭಿಕ ಹಂತದ ಧ್ಯೇಯೋದ್ದೇಶಗಳನ್ನು ಹಾಕಿಕೊಟ್ಟಿರುತ್ತದೆ. ಬಹುಶಃ ಪ್ರತೀ ಸಮಿತಿಯೂ ಈ ಕೋರ್ಸ್ ಗಳನ್ನು ತೆಗೆದುಕೊಂಡ ವಿದ್ಯಾರ್ಥಿಗಳು ಆಯಾ ಕ್ಷೇತ್ರಗಳಲ್ಲಿ ಉನ್ನತ ಶಿಕ್ಷಣವನ್ನು ಹೊಂದಿ ಅವರ ಕಲಿಕೆ ಕಾಲೇಜು ವಿಶ್ವವಿದ್ಯಾಲಯಗಳಲ್ಲಿ ಪ್ರಧಾನ ಪಠ್ಯ ವಿಷಯದಲ್ಲಿ ಅಧ್ಯಯನ ಮಾಡುವುದರೊಂದಿಗೆ ಪರಿಸಮಾಪ್ತಿಯಾಗುತ್ತೆಂಬ ಕಲ್ಪನೆಯೊಂದಿಗೆ ಪ್ರಾಥಮಿಕ ಕೋರ್ಸ್ ಗಳ ರೂಪುರೇಷೆಯನ್ನು ರಚಿಸುವುದು ತಮ್ಮ ಜವಾಬ್ದಾರಿಯೆಂದು ಭಾವಿಸಿದ್ದರು ಎನಿಸುತ್ತದೆ. ಪ್ರೌಢಶಾಲೆಯ ಪಠ್ಯಕ್ರಮದ ಕುರಿತಾಗಿ ವಿಷಯ ತಜ್ಞರ ಬಳಿ ಖಂಡಿತವಾಗಿ ಈ ಪ್ರಶ್ನೆಯನ್ನು ಕೇಳಬಾರದು. ಅವರನ್ನು ಕೇಳಬೇಕಾದ ಪ್ರಶ್ನೆ ಬಹುಶಃ ಈ ರೀತಿಯದ್ದಾಗಿರಬೇಕು: ನಿಮ್ಮ ಕ್ಷೇತ್ರದಲ್ಲಿ ವಿಶೇಷ ತಜ್ಞರಾಗುವ ಬಯಕೆ ಇಲ್ಲದಿರುವ ಯುವಕರಿಗೆ ನಿಮ್ಮ ವಿಷಯ ಯಾವ ರೀತಿಯ ಕೊಡುಗೆಗಳನ್ನು ನೀಡಬಹುದು? ನಿಮ್ಮ ವಿಷಯ ಸಾಮಾನ್ಯ ಜನರಿಗೆ ಯಾವ ಕೊಡುಗೆಯನ್ನು ನೀಡಬಹುದು? ವಿಷಯ ತಜ್ಞರು ಈ

ಪ್ರಶ್ನೆಗಳನ್ನು ಉತ್ತರಿಸಬಲ್ಲರಾದರೆ, ಅವರು ಮಹತ್ವದ ಕೊಡುಗೆಯನ್ನು ನೀಡಬಲ್ಲರು. ಏಕೆಂದರೆ ಅವರ ಕ್ಷೇತ್ರದಲ್ಲಿ ಅವರಿಗೆ ವಿಶೇಷ ಜ್ಞಾನವಿರುತ್ತದೆ. ತಮಗೆ ಮತ್ತು ತಮ್ಮ ಸಹೋದ್ಯೋಗಿಗಳಿಗೆ ವಿಷಯದಿಂದ ಏನು ದೊರಕಿದೆ ಎನ್ನುವುದನ್ನು ತಿಳಿಯುವ ಅವಕಾಶ ಅವರಲ್ಲಿ ಅನೇಕರಿಗೆ ದೊರಕಿರುತ್ತದೆ. ಅವರಿಗೆ ವಿಷಯ ಚೆನ್ನಾಗಿ ತಿಳಿದಿರುವುದರಿಂದ ವಿಷಯ (discipline), ವಿಷಯದ ವಸ್ತು ಇತ್ಯಾದಿಗಳು ಇತರರಿಗೆ ಯಾವ ರೀತಿಯ ಕೊಡುಗೆ ನೀಡಬಹುದು ಎನ್ನುವುದನ್ನು ಅವರು ಸೂಚಿಸಲು ಸಾಧ್ಯವಿರುತ್ತದೆ.

ಇತ್ತೀಚಿನ ಕೆಲವು ಪಠ್ಯಕ್ರಮ ವರದಿಗಳಲ್ಲಿ ವಿಷಯ ತಜ್ಞರು ಈ ರೀತಿಯ ಪ್ರಶ್ನೆಗಳನ್ನು ಉತ್ತರಿಸುವುದರ ಮೂಲಕ ಉಪಯುಕ್ತ ಸಲಹೆಗಳನ್ನು ನೀಡಬಹುದು ಎಂದು ತಿಳಿಸುತ್ತದೆ. ಪ್ರಗತಿಪರ ಶಿಕ್ಷಣ ಸಂಘದ ಪ್ರೌಢಶಾಲಾ ಪಠ್ಯಕ್ರಮದ ಆಯೋಗವು (Commission on the Secondary School Curriculum of the Progressive Education Association) ಪ್ರಕಟಿಸಿರುವ "ಸಾಮಾನ್ಯ ಶಿಕ್ಷಣದಲ್ಲಿ ವಿಜ್ಞಾನ", "ಸಾಮಾನ್ಯ ಶಿಕ್ಷಣದಲ್ಲಿ ಗಣಿತ", "ಸಾಮಾನ್ಯ ಶಿಕ್ಷಣದಲ್ಲಿ ಸಮಾಜ ಅಧ್ಯಯನ" ಇತ್ಯಾದಿ ಅನೇಕ ಶೀರ್ಷಿಕೆಯುಳ್ಳ ವರದಿಗಳು ಬಹಳ ಉಪಯುಕ್ತವಾಗಿವೆ. "ಒಂದು ವಿಷಯಕ್ಕೆ ಸಂಬಂಧಿಸಿದ ಹಾಗೆ ವಿಶೇಷ ಪರಿಣತಿ ಪಡೆಯುವ ಇಚ್ಛೆ ಇಲ್ಲದಿರುವ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಈ ವಿಷಯವು ಯಾವ ಕೊಡುಗೆಯನ್ನು ನೀಡಬಹುದು?" ಎನ್ನುವ ಪ್ರಶ್ನೆಗೆ ಈ ವರದಿಗಳು ಸ್ವಲ್ಪ ಮಟ್ಟಿಗೆ ಬೆಳಕು ಚೆಲ್ಲಿವೆ. ಇನ್ನೂ ಕೆಲವು ಗುಂಪುಗಳು ಇದೇ ರೀತಿಯ ಕೆಲವು ವರದಿಗಳನ್ನು ಪ್ರಕಟಿಸಿವೆ. ಈ ವರದಿಗಳು, ನಮಗೆ ಭರವಸೆಯನ್ನು ನೀಡುವಂತಹ ವರದಿಗಳಾಗಿವೆ. ರಾಷ್ಟ್ರೀಯ ಗಣಿತ ಶಿಕ್ಷಕರ ಪರಿಷತ್ತು (The National Council of Mathematics Teachers), ರಾಷ್ಟ್ರೀಯ ಇಂಗ್ಲಿಷ್ ಶಿಕ್ಷಕರ ಪರಿಷತ್ತು (The National Council of English Teachers), ರಾಷ್ಟ್ರೀಯ ಸಮಾಜ ಅಧ್ಯಯನ ಶಿಕ್ಷಕರ ಪರಿಷತ್ತುಗಳ(The National Council of Social Studies Teachers) ಸಮಿತಿ ವರದಿಗಳು ಇದಕ್ಕೆ ಉತ್ತಮ ಉದಾಹರಣೆಗಳಾಗಿವೆ. ಅನೇಕ ಹಾಗೂ ವಿಭಿನ್ನ ತರನಾದ ವಿದ್ಯಾರ್ಥಿಗಳಿಗೆ ಅಧ್ಯಯನ ವಿಷಯಗಳು ಯಾವ ಕೊಡುಗೆಗಳನ್ನು ನೀಡಬಹುದು ಎನ್ನುವ ಅಂಶವನ್ನು ಹತ್ತರ ಸಮಿತಿಗೆ (Committee of Ten) ವರದಿಗಳನ್ನು ಸಿದ್ಧಪಡಿಸಿದ ಸಮಿತಿಗಳು ಗುರುತಿಸಿದ್ದಕ್ಕಿಂತ ಹೆಚ್ಚು ಸ್ಪಷ್ಟವಾಗಿ ಇವು ಗುರುತಿಸಿವೆ. ಹಿಂದಿನ ವರದಿಗಳಲ್ಲಿ ಇವುಗಳನ್ನು ಪರಿಗಣಿಸಿದಂತೆ ಕಾಣಬರುವುದಿಲ್ಲ. ಸಾಮಾನ್ಯವಾಗಿ ಇತ್ತೀಚಿನ ವರದಿಗಳು ಧ್ಯೇಯೋದ್ದೇಶಗಳ ಕುರಿತಾದ ಸಲಹೆಗಳಿಗೆ ಮತ್ತೊಂದು ಆಕರವಾಗಿ ಉಪಯುಕ್ತವಾಗುತ್ತವೆ ಎಂದು ಹೇಳಬಹುದು.

ವಿಷಯವಾರು ಗುಂಪುಗಳ ಅನೇಕ ವರದಿಗಳು ಕೇವಲ ಧ್ಯೇಯೋದ್ದೇಶಗಳನ್ನು ಕೊಟ್ಟು ಅಂತ್ಯಗೊಳ್ಳುವುದಿಲ್ಲ ಹಾಗೂ ಅವುಗಳಲ್ಲಿ ಧ್ಯೇಯೋದ್ದೇಶಗಳ ನಿರ್ದಿಷ್ಟ ಪಟ್ಟಿಯೂ ಇರುವುದಿಲ್ಲ.

ಅನೇಕ ವರದಿಗಳು ಆ ವಿಷಯ ಕ್ಷೇತ್ರದ ತಮ್ಮ ಪರಿಕಲ್ಪನೆಯ ರೂಪುರೇಷೆಯನ್ನು ಪರಿಚಯಿಸಿ ಆ ನಂತರ ಸಾಮಾನ್ಯ ಶಿಕ್ಷಣದ ಗುರಿಗಳಿಗೆ ಇದನ್ನು ಬಳಸಲು ಸಾಧ್ಯವಿರುವ ಮಾರ್ಗಗಳನ್ನು ಸೂಚಿಸುತ್ತವೆ. ಪಠ್ಯಕ್ರಮದ ಕೆಲಸ ಕೈಗೆತ್ತಿಕೊಂಡಿರುವವರು ಈ ವರದಿಗಳ ವಿವರಗಳನ್ನು ಸಾವಧಾನವಾಗಿ ಓದುವ ಅಗತ್ಯವನ್ನು ಕಂಡುಕೊಳ್ಳುತ್ತಾರೆ. ಆ ಓದಿನ ಮೂಲಕ ವರದಿಯಲ್ಲಿರುವ ಅನೇಕ ಹೇಳಿಕೆಗಳೊಳಗೆ ಧ್ಯೇಯೋದ್ದೇಶಗಳ ಕುರಿತಾದ ಸುಳಿವುಗಳು ಅಂತರ್ಗತವಾಗಿರುವುದನ್ನು ತಿಳಿದುಕೊಳ್ಳುತ್ತಾರೆ. ಸಾಮಾನ್ಯವಾಗಿ ಈ ವರದಿಗಳಿಂದ ಧ್ಯೇಯೋದ್ದೇಶಗಳ ಕುರಿತು ಎರಡು ರೀತಿಯ ಸಲಹೆಗಳು ದೊರಕುತ್ತವೆ. ಮೊದಲಿಗೆ, ಒಂದು ನಿರ್ದಿಷ್ಟ ವಿಷಯವು ಪೂರೈಸಬಹುದಾದ ಸರ್ವೇಸಾಮಾನ್ಯ ಕಾರ್ಯಗಳಿಗೆ ಸಂಬಂಧಿಸಿದಂತೆ ಕೆಲವು ಸಲಹೆಗಳು ಸಿಗುತ್ತವೆ. ಎರಡನೆಯದು, ಒಂದು ವಿಷಯದ ಮೂಲ ಕಾರ್ಯಗಳಿಗೆ ಸಂಬಂಧಿಸಿರದ ಆದರೆ ಅದೇ ವಿಷಯವು ಇತರ ಘನವಾದ ಕಾರ್ಯಗಳಿಗೆ ನೀಡಬಹುದಾದ ನಿರ್ದಿಷ್ಟ ಕೊಡುಗೆಗಳಿಗೆ ಸಂಬಂಧಿಸಿದಂತೆ ಕೆಲವು ಸಲಹೆಗಳು ಸಿಗುತ್ತವೆ.

**Commented [C1]:** Text was rekeyed due to blanks with few changes

ಮೇಲೆ ತಿಳಿಸಿದ ವರದಿಗಳಿಂದ ಈ ಎರಡು ರೀತಿಯ ಸಲಹೆಗಳನ್ನು ಪಡೆಯುವುದನ್ನು ಈಗ ನಿರೂಪಿಸುತ್ತೇನೆ. ಉದಾಹರಣೆಗೆ, ಇಂಗ್ಲಿಷ್ ಗುಂಪುಗಳ ಇತ್ತೀಚಿನ ವರದಿಗಳಲ್ಲಿ ಇಂಗ್ಲಿಷ್ ನ ಭಾಷಾ ಅಧ್ಯಯನ ಮಾಡುವುದರಿಂದ ಆಗುವ ಶೈಕ್ಷಣಿಕ ಕಾರ್ಯಗಳ ಕುರಿತು ಸಲಹೆಗಳನ್ನು ಕೊಟ್ಟಿವೆ. ಅರ್ಥದ ಸಂವಹನ ಮತ್ತು ಸ್ವರೂಪದ (form) ಸಂವಹನವೂ ಸೇರಿದಂತೆ ಪರಿಣಾಮಕಾರೀ ಸಂವಹನವನ್ನು ರೂಪಿಸುವುದು ಮೊದಲನೆಯ ಕಾರ್ಯ. ಪರಿಣಾಮಕಾರಿಯಾಗಿ ಅಭಿವ್ಯಕ್ತಿಸುವುದು ಎರಡನೇ ರೀತಿಯ ಕೊಡುಗೆ. ಅನೇಕ ರೀತಿಯ ಬಾಹ್ಯ ಮತ್ತು ಆಂತರಿಕ ಒತ್ತಡಗಳಿಗೆ ವ್ಯಕ್ತಿಯು ಆಂತರಿಕವಾಗಿ ಮಾಡಿಕೊಳ್ಳುವ ಹೊಂದಾಣಿಕೆಯ ಪ್ರಯತ್ನವೂ ಅಭಿವ್ಯಕ್ತಿಯ ಅಂಗವಾಗಿ ಸೇರಿದೆ. ಮಂಡಿತವಾದ ಚಿಂತನೆಯನ್ನು ಸ್ಪಷ್ಟಪಡಿಸಿಕೊಳ್ಳಲು ಭಾಷೆ ಸಹಕಾರಿಯಾಗುವುದು ಭಾಷಾ ಅಧ್ಯಯನದ ಮೂರನೆಯ ಕಾರ್ಯ. ಅಂದರೆ, ವಿದ್ಯಾರ್ಥಿಗಳು ಕೆಲವು ವಿಚಾರಗಳನ್ನು ತಿಳಿದ ನಂತರ ಪ್ರಾರಂಭಿಕ ಹಂತದ ಇಂಗ್ಲಿಷ್ ಜ್ಞಾನ ಬಳಸಿಕೊಂಡು ಅವರು ತಿಳಿದುಕೊಂಡ ವಿಚಾರವನ್ನು ಕಾರ್ಯಕಾರಿ ಪದಗಳಲ್ಲಿ (operational words) ಅನುವಾದಿಸುವ ಮಟ್ಟಕ್ಕೆ ಸ್ಪಷ್ಟವಾಗಿ ಅರ್ಥಮಾಡಿಕೊಂಡಿದ್ದಾರೆ ಎಂದು ತಂತಾವೇ ತಿಳಿಯಲು ಅವರಿಗೆ ಸಹಾಯ ಮಾಡುವುದು. ಗೊಂದಲದಲ್ಲಿದ್ದಾಗ ಅವನ ಬರವಣಿಗೆಯು ಸ್ಪಷ್ಟವಾಗಿತ್ತು ಎನ್ನುವ ಜಾರ್ಜ್ ಹಬರ್ಟ್ ಪಾಮರ್ (George Herbert Palmer) ರವರ ಹೇಳಿಕೆಯು ಮೇಲೆ ಹೇಳಿದ ಚಿಂತನಾ ಸ್ಪಷ್ಟತೆಯ ಕಾರ್ಯವನ್ನು ಸೊಗಸಾಗಿ ನಿರೂಪಿಸುತ್ತದೆ.

ಸಾಹಿತ್ಯವು ಕೊಡುಗೆ ನೀಡಬಹುದಾದ ವೈವಿಧ್ಯಮಯವಾದ ಮಹತ್ತರ ಕಾರ್ಯಗಳು ಸಾಹಿತ್ಯಕ ವಲಯವನ್ನು ಪರಿಗಣಿಸಿದ ಇಂಗ್ಲಿಷ್ ಸಮಿತಿಗಳ ಗಮನಕ್ಕೆ ಬಂದಿದೆ. ಕೆಲವರು ಇದರಲ್ಲಿನ ವೈಯಕ್ತಿಕ ಹುಡುಕಾಟದ ಮೌಲ್ಯವನ್ನು ಎತ್ತಿ ಹಿಡಿಯುತ್ತಾರೆ. ಅರ್ಥಾತ್, ವ್ಯಕ್ತಿಗಳು ತಾವು ಭಾಗವಾಗಿರುವ ತಮ್ಮ ಸುತ್ತಲಿನ ಪ್ರಪಂಚವನ್ನು ಬಿಟ್ಟು ಅದರಿಂದ ಎಷ್ಟೋ ದೂರವಿರುವ ಜೀವನ ಮತ್ತು ಜೀವನ ರೀತಿಗಳನ್ನು ಅನ್ವೇಷಿಸುವ ಅವಕಾಶವನ್ನು ಸಾಹಿತ್ಯವು ಒದಗಿಸಿಕೊಡುತ್ತದೆ. ಜೊತೆಗೆ, ನಿಜ ಜೀವನದಲ್ಲಿ ಅನ್ವೇಷಿಸಲು ಯಾವುದು ಬಹಳ ಅಪಾಯಕಾರಿಯೋ ಅಥವಾ ಯಾವುದು ಪರಿಣಾಮಗಳಿಂದ ತುಂಬಿದೆಯೋ ಅಂತಹ ಸಂದರ್ಭಗಳನ್ನು ಪರಾನುಭವದ ಮೂಲಕ ಅನ್ವೇಷಿಸುವ ಅವಕಾಶವನ್ನು ಸಾಹಿತ್ಯವು ನೀಡುತ್ತದೆ. ಯುವಜನರ ಅನುಭವವನ್ನು ಸಾಕಷ್ಟು ವಿಸ್ತಾರಗೊಳಿಸುವುದು ಸಾಹಿತ್ಯದ ಒಟ್ಟಾರೆ ಕಾರ್ಯ ಎಂದು ಅನೇಕ ಸಮಿತಿಗಳ ವರದಿಗಳು ಹೇಳುತ್ತವೆ. ಈ ಅನುಭವಗಳು ಭೌಗೋಳಿಕ ಅವಕಾಶಗಳಿಂದ ಮೊಟಕುಗೊಳ್ಳುವುದಿಲ್ಲ, ಅಥವಾ ಅವಕ್ಕೆ ಕಾಲದ ಮಿತಿ ಇರುವುದಿಲ್ಲ ಅಥವಾ ಯಾವುದೇ ಸಾಮಾಜಿಕ ವರ್ಗದಿಂದ ಮಿತಿ ಉಂಟಾಗುವುದಿಲ್ಲ ಅಥವಾ ಕಸುಬು ಅಥವಾ ಅವರು ಭಾಗವಹಿಸುವ ಸಾಮಾಜಿಕ ಗುಂಪುಗಳಿಂದ ಸಹ ಮಿತಿ ತಲೆದೋರುವುದಿಲ್ಲ. ಓದುಗ ಪರಾನುಭವಗಳಿಂದ ತಾನು ಅನುಭವ ಗಳಿಸಿಕೊಂಡು ತನ್ನ ದಿಗಂತವನ್ನು ಹೆಚ್ಚು ವಿಸ್ತಾರಗೊಳಿಸಿಕೊಳ್ಳಲು ಸಾಹಿತ್ಯವು ಒಂದು ಮಾರ್ಗವಾಗುತ್ತದೆ. ಓದುಗರಿಗೆ ಮಹತ್ವವೆನಿಸಿದ ಮತ್ತು ಅವರಿಗೆ ತೃಪ್ತಿಕೊಡುವಂತಹ ಓದಿನ ಹವ್ಯಾಸ ಮತ್ತು ಅದರಲ್ಲಿ ಅಭಿರುಚಿ ಮೂಡಿಸುವುದು ಸಾಹಿತ್ಯದ ಇನ್ನೊಂದು ಕಾರ್ಯ. ಬರೀ ತಾರ್ಕಿಕ ಬೆಳವಣಿಗೆ ಮತ್ತು ವಿಚಾರಗಳ ವಿವರಣೆಗಳನ್ನು ವಿಶ್ಲೇಷಿಸುವ ಕೌಶಲಕ್ಕೆ ಸೀಮಿತಗೊಳ್ಳದೆ ಸಾಹಿತ್ಯಕ ವಸ್ತುಗಳನ್ನು ವ್ಯಾಖ್ಯಾನಿಸುವ ಕೌಶಲವನ್ನು ಬೆಳೆಸುವುದು ಬಹಳ ಮುಖ್ಯ ಧ್ಯೇಯೋದ್ದೇಶವೆಂದು ಕೆಲವು ಇಂಗ್ಲಿಷ್ ಸಮಿತಿಗಳು ಒತ್ತಿ ಹೇಳುತ್ತವೆ. ಲಿಖಿತ ಭಾಷೆಯಲ್ಲಿ ವ್ಯವಸ್ಥಿತವಾಗಿ ನಿರೂಪಿಸಿರುವ ಎಲ್ಲವೂ - ಮಾನವ ಪ್ರೇರಣೆ ಒಳ ಒತ್ತಡಗಳನ್ನೂ ಒಳಗೊಂಡಂತೆ - ಅಧ್ಯಯನ ಮತ್ತು ವಿಮರ್ಶಾತ್ಮಕ ವ್ಯಾಖ್ಯಾನಕ್ಕೆ ಒಳಪಡಿಸಬೇಕೆಂದು ಇವರ ಅಭಿಪ್ರಾಯ. ಕೊನೆಯದಾಗಿ, ಕೆಲವು ಇಂಗ್ಲಿಷ್ ಸಮಿತಿಗಳು ಸಾಹಿತ್ಯವು ಮೆಚ್ಚುಗೆಯ (appreciation) ಕಾರ್ಯವನ್ನು ನೆರವೇರಿಸುತ್ತದೆ ಎಂದು ಪ್ರತಿಪಾದಿಸುತ್ತವೆ. ಮೆಚ್ಚುಗೆಯಲ್ಲಿ ಸಾಹಿತ್ಯಕ ಸ್ವರೂಪಗಳಿಗೆ ಗಮನಾರ್ಹವಾದ ಭಾವನಾತ್ಮಕ ಪ್ರತಿಕ್ರಿಯೆ ಹಾಗೂ ಸ್ವರೂಪ ಮತ್ತು ವಸ್ತುವಿನ ವಿಮರ್ಶಾತ್ಮಕ ಮೌಲ್ಯಮಾಪನಕ್ಕೆ ಅವಕಾಶಗಳಿದ್ದು, ಅದು ಸಾಹಿತ್ಯದಲ್ಲಿ ಒಳ್ಳೆಯ ಅಭಿರುಚಿಯನ್ನು ಬೆಳೆಸುವ ಮಾರ್ಗವಾಗುತ್ತದೆ.

ಭಾಷೆ ಮತ್ತು ಸಾಹಿತ್ಯದಿಂದ ಸಂಭವಿಸಬಹುದಾದ ಕಾರ್ಯಗಳ ಕುರಿತಾದ ಈ ಸಲಹೆಗಳಿಂದ ಭಾಷೆ ಮತ್ತು ಸಾಹಿತ್ಯದ ಮೂಲಕ ಶಾಲೆಯಲ್ಲಿ ಸಾಧಿಸಬಹುದಾದ ಧ್ಯೇಯೋದ್ದೇಶಗಳಿಗೆ ವಿಸ್ತಾರ ಹರವಿನ ಹಲವು ಶೀರ್ಷಿಕೆಗಳು ದೊರಕುತ್ತವೆ. ಮಕ್ಕಳು,

ಹದಿಹರೆಯದವರು ಅಥವಾ ವಯಸ್ಕರ ಬೆಳವಣಿಗೆಯಲ್ಲಿ ಭಾಷೆ ಮತ್ತು ಸಾಹಿತ್ಯ ನೀಡಬಹುದಾದ ಕೊಡುಗೆಯ ವ್ಯಾಪಕ ಸಾಧ್ಯತೆಯ ಸ್ವರೂಪವನ್ನು ಇಂತಹ ವಿಶ್ಲೇಷಣೆ ತೋರಿಸಿಕೊಡುತ್ತದೆ. ಜ್ಞಾನ, ಕೌಶಲ ಮತ್ತು ರೂಢಿಗತ ಅಭ್ಯಾಸಗಳನ್ನು ಮೀರಿದ ಧ್ಯೇಯೋದ್ದೇಶಗಳನ್ನು ಇವು ಸೂಚಿಸುತ್ತವೆ. ವಿಶ್ಲೇಷಣಾತ್ಮಕ ವ್ಯಾಖ್ಯಾನ ಅಥವಾ ಅನೇಕ ಮಗ್ಗುಲಗಳ ಚಿಂತನೆಗಳು, ಭಾವನಾತ್ಮಕ ಪ್ರತಿಕ್ರಿಯೆಗಳು, ಆಸಕ್ತಿಗಳು ಮತ್ತು ಇದೇ ರೀತಿಯ ಅನೇಕ ಅಂಶಗಳೂ ಇದರಲ್ಲಿ ಒಳಗೊಂಡಿರುತ್ತವೆ.

ಒಂದ ವಿಷಯದ ಮಹತ್ತರ ಕಾರ್ಯಗಳ ಕುರಿತಾದ ಸಲಹೆಗಳ ಮತ್ತೊಂದು ನಿದರ್ಶನ ಇತ್ತೀಚಿನ ವಿಜ್ಞಾನ ಸಮಿತಿಗಳ ವರದಿಗಳಿಂದ ದೊರಕುತ್ತದೆ. ಅಂತಹ ಒಂದು ವರದಿ ಸಾಮಾನ್ಯ ಪ್ರಜೆಗೆ ವಿಜ್ಞಾನವು ಮೂರು ರೀತಿಗಳಲ್ಲಿ ಉಪಯುಕ್ತವಾಗಬಲ್ಲದು ಎಂಬ ಸಲಹೆ ನೀಡುತ್ತದೆ. ಇದರಲ್ಲಿ ಮೊದಲನೆಯದು ಆರೋಗ್ಯಕ್ಕೆ ಸಂಬಂಧಿಸಿದ್ದು. ವಿಜ್ಞಾನವು ವೈಯಕ್ತಿಕ ಹಾಗೂ ಸಾರ್ವಜನಿಕ ಆರೋಗ್ಯ ಸುಧಾರಣೆಗೆ ಕೊಡುಗೆ ನೀಡಬಲ್ಲದು. ಇದರಲ್ಲಿ ಆರೋಗ್ಯಕರ ಪದ್ಧತಿಗಳು, ಆರೋಗ್ಯಕರ ಮನೋಧೋರಣೆ ಮತ್ತು ಆರೋಗ್ಯ ಜ್ಞಾನ ಇವೆಲ್ಲವೂ ಮಿಳಿತವಾಗಿದೆ. ಖಾಯಿಲೆ ಹರಡುವ ರೀತಿ, ಸಮುದಾಯ ತನ್ನನ್ನು ಅನಾರೋಗ್ಯದಿಂದ ಕಾಪಾಡಿಕೊಳ್ಳಲು ತೆಗೆದುಕೊಳ್ಳಬಹುದಾದ ಮುಂಜಾಗ್ರತಾ ಕ್ರಮ ಮತ್ತಿತ್ತರ ಅನಾರೋಗ್ಯಕ್ಕೆ ಸಂಬಂಧಪಟ್ಟ ವಿಷಯಗಳು ಆರೋಗ್ಯ ಜ್ಞಾನದ ಭಾಗವಾಗುತ್ತದೆ. ವಿಜ್ಞಾನದ ಎರಡನೇ ಸೂಚಿತ ಕಾರ್ಯವೆಂದರೆ ನೈಸರ್ಗಿಕ ಸಂಪನ್ಮೂಲಗಳ ಬಳಕೆ ಮತ್ತು ಸಂರಕ್ಷಣೆ. ಅಂದರೆ, ಲಭ್ಯವಿರುವ ದ್ರವ್ಯ ಮತ್ತು ಶಕ್ತಿಯ ಸಂಪನ್ಮೂಲಗಳ ಬಗ್ಗೆ ತಿಳುವಳಿಕೆಯನ್ನು ವಿಜ್ಞಾನವು ನೀಡಬಲ್ಲದು. ನಮಗೆ ದೊರಕುವ ದ್ರವ್ಯ ಮತ್ತು ಶಕ್ತಿ, ಒಟ್ಟಾರೆ ಸಂಪನ್ಮೂಲ ಅತಿಯಾಗಿ ಕ್ಷೀಣವಾಗದಂತೆ ಎಚ್ಚರ ವಹಿಸಿ ಅವುಗಳನ್ನು ನಾವು ಪಡೆದುಕೊಳ್ಳುವ ಮತ್ತು ಬಳಸುವ ವಿಧಾನ, ಶಕ್ತಿಯ ಪರಿವರ್ತನೆಯ ಅನೇಕ ರೂಪಗಳ ಕ್ಷಮತೆಯ ಕುರಿತಾದ ಅರಿವು, ವಿವಿಧ ಸಸ್ಯ ಮತ್ತು ಪ್ರಾಣಿ ಸಂಪನ್ಮೂಲದ ಅರಿವು ಮತ್ತು ಅದನ್ನು ಸಮರ್ಪಕವಾಗಿ ಬಳಸುವ ಮಾರ್ಗಗಳ ಕುರಿತಾದ ತಿಳುವಳಿಕೆಯನ್ನು ವಿಜ್ಞಾನ ಸಾಧ್ಯವಾಗಿಸುತ್ತದೆ. ವಿಜ್ಞಾನದ ಮೂರನೇ ಕಾರ್ಯ ನಮಗೆ ತೃಪ್ತಿಕರವಾಗಿ ಜಗತ್ತಿನ ಚಿತ್ರಣವನ್ನು ಒದಗಿಸುವುದು. ಅಂದರೆ, ವಿಜ್ಞಾನಿ ಜಗತ್ತನ್ನು ನೋಡುವ ರೀತಿಯನ್ನು ಅರ್ಥೈಸಿಕೊಳ್ಳುವುದು ಮತ್ತು ಅದರೊಡನೆ ಮಾನವರಿಗೆ ಇರುವ ಸಂಬಂಧವನ್ನು ತಿಳಿದುಕೊಳ್ಳುವುದು, ಮತ್ತು ಬೃಹತ್ತಾದ ವಿಶ್ವದಲ್ಲಿ ನಮ್ಮ ಪ್ರಪಂಚದ ಸ್ಥಾನಮುಂತಾದವುಗಳ ಕುರಿತಾದ ತಿಳುವಳಿಕೆ ವಿಜ್ಞಾನದಿಂದ ಸಾಧ್ಯ. ವಿಜ್ಞಾನದ ವರದಿಗಳಲ್ಲಿ ಸೂಚಿತವಾಗಿರುವ ಈ ಕಾರ್ಯಗಳಿಂದ ವಿಜ್ಞಾನ ಕ್ಷೇತ್ರದಲ್ಲಿ ಅನೇಕಾನೇಕ ಮಹತ್ವಪೂರ್ಣ ಧ್ಯೇಯೋದ್ದೇಶಗಳನ್ನು ಪಡೆಯಲು ಸಾಧ್ಯವಿದೆ. ವಿಜ್ಞಾನ ಸಂಬಂಧಿತ ಧ್ಯೇಯೋದ್ದೇಶಗಳು, ಜ್ಞಾನ, ಮನೋಧೋರಣೆ, ಸಮಸ್ಯಾ ಪರಿಹಾರ ಸಾಮರ್ಥ್ಯ, ಆಸಕ್ತಿ ಇತ್ಯಾದಿಗಳನ್ನು ಇದರಿಂದ ಪಡೆಯಬಹುದು.

ಒಂದು ವಿಷಯಕ್ಕೆ ಸಂಬಂಧಿಸಿದ ಸಲಹೆಗಳು ಯಾವ ರೀತಿಗಳಲ್ಲಿ ಸಾಮಾನ್ಯ ಶಿಕ್ಷಣದಲ್ಲಿ ಮಹತ್ವದ ಕಾರ್ಯಗಳನ್ನು ನೆರವೇರಿಸಬಲ್ಲದು ಎನ್ನುವುದಕ್ಕೆ ಇತ್ತೀಚಿನ ಕಲಾ ವರದಿ ಇನ್ನೊಂದು ಉದಾಹರಣೆ. ಕಲಾ ವರದಿಯಲ್ಲಿ ಸುಮಾರು ಐದು ಕಾರ್ಯಗಳನ್ನು ಪ್ರಸ್ತಾಪಿಸಲಾಗಿದೆ. ಮೊಟ್ಟ ಮೊದಲಿಗೆ ಹಾಗೂ ಮನ್ರೋ (Monroe)ರವರ ಲೇಖನದ ಪ್ರಕಾರ ಅತ್ಯಂತ ಮಹತ್ವಪೂರ್ಣ ಕಾರ್ಯವೆಂದರೆ ಕಲೆಯು ವಿದ್ಯಾರ್ಥಿಯ ಗ್ರಹಿಕೆಯ (perception) ಹರವನ್ನು ವಿಸ್ತಾರಗೊಳಿಸುವುದು. ಕಲೆಯ ಮೂಲಕ ವ್ಯಕ್ತಿ ಹೆಚ್ಚು ಸ್ಪಷ್ಟವಾಗಿ ವಿಷಯಗಳನ್ನು ನೋಡಲು ಸಾಧ್ಯ, ಕಲಾವಿದರ ಕಾಣ್ಕೆಯ ಮೂಲಕ ವಿಷಯವನ್ನು ನೋಡಲು ಸಾಧ್ಯ. ಈ ರೀತಿಯ ಗ್ರಹಿಕೆ ಇನ್ಯಾವ ಪ್ರಕಾರದ ಮೂಲಕವೂ ಸಾಧ್ಯವಿಲ್ಲ. ಕಲಾ ಸೃಷ್ಟಿ ಮತ್ತು ಕಲಾ ವಿಮರ್ಶೆಗಳೆರಡರಿಂದಲೂ ಗ್ರಹಿಕೆ ವಿಸ್ತಾರವಾಗುವ ಸಂಭವವಿರುತ್ತದೆ. ಕಲೆಯ ಎರಡನೆಯ ಕಾರ್ಯ ಎಂದು ಪ್ರಸ್ತಾಪಿಸಿರುವುದು ವಿಚಾರಗಳ ಮತ್ತು ಭಾವನೆಗಳ ಸ್ಪಷ್ಟತೆ. ವಾಚ್ಯ ಮಾಧ್ಯಮದ ಜೊತೆಗೆ ಸಂವಹನಕ್ಕೆ ಇನ್ನೊಂದು ಮಾಧ್ಯಮ ದೊರಕುವುದರಿಂದ ಹೆಚ್ಚಿನ ಸ್ಪಷ್ಟತೆ ಮೂಡುವ ಸಂಭವವಿರುತ್ತದೆ. ಕೆಲವು ವಿದ್ಯಾರ್ಥಿಗಳಿಗೆ ಬರವಣಿಗೆ ಮತ್ತು ಮೌಖಿಕ ಅಭಿವ್ಯಕ್ತಿಯ ಬದಲು ಕಲಾ ಮಾಧ್ಯಮಗಳ ಮೂಲಕ ಹೆಚ್ಚು ಸಮರ್ಪಕವಾಗಿ ಅಭಿವ್ಯಕ್ತಿಸಲು ಸಾಧ್ಯವಾಗುತ್ತದೆ. ಅಂತಹವರಿಗೆ ಕಲೆ ಬಹಳ ಮಹತ್ವದ ಶೈಕ್ಷಣಿಕ ಮಾಧ್ಯಮವಾಗುತ್ತದೆ. ಮೂರನೆಯ ಕಾರ್ಯ ವೈಯಕ್ತಿಕ ಸಮನ್ವಯತೆ. ಸಾಂಕೇತಿಕ ಮಾಧ್ಯಮದ ಮೂಲಕ ಒತ್ತಡ ಉಪಶಮನವಾಗುವುದಕ್ಕೆ ಕಲೆಯ ಕೊಡುಗೆ ಕೆಲವೊಮ್ಮೆ ಇದೆಯೆಂದು ತಿಳಿಸುತ್ತದೆ. ಒಂದು ಸ್ಟುಡಿಯೋ ಮತ್ತು ಅಂಗಡಿಯಲ್ಲಿ ವಸ್ತುವನ್ನು ಮಾಡುವುದು ಹಾಗೂ ನೃತ್ಯ ಮತ್ತು ಸಂಗೀತದ ಅಭ್ಯಾಸವು ವೈಯಕ್ತಿಕ ಅಭಿವ್ಯಕ್ತಿಯ ಜೊತೆಗೆ ಒತ್ತಡದ ಉಪಶಮನಕ್ಕೂ ಅವಕಾಶಗಳನ್ನು ಕಲ್ಪಿಸಿ ಕೊಡುತ್ತದೆ. ಈ ಕಾರಣದಿಂದ ಕೆಲವು ಮಕ್ಕಳಿಗೆ ಚೆನ್ನಾಗಿ ಬೆಸೆದುಕೊಳ್ಳುವ ಅವಕಾಶ ದೊರಕುತ್ತದೆ.

ಕಲೆಯ ನಾಲ್ಕನೆಯ ಕಾರ್ಯವು ಆಸಕ್ತಿ ಮತ್ತು ಮೌಲ್ಯಗಳ ಬೆಳವಣಿಗೆ. ಸೌಂದರ್ಯಪ್ರಜ್ಞೆಯ ಮೌಲ್ಯಗಳಲ್ಲಿ (aesthetic values) ವಿದ್ಯಾರ್ಥಿಗೆ ಅಸಕ್ತಿಕರವಾಗಿರುವ ಅಂಶಗಳಿವೆ. ಜೊತೆಗೆ ಜೀವನದ ಅತ್ಯುನ್ನತ ಅಂತಿಮ ಮೌಲ್ಯದೊಂದಿಗೆ ಅತ್ಯಂತ ಮಹತ್ವದ ಜೀವನ ಮೌಲ್ಯಗಳನ್ನು ಕಲೆಯ ಕ್ಷೇತ್ರದಲ್ಲಿ ಅಭಿವ್ಯಕ್ತಿಸಲು ಸೌಂದರ್ಯಪ್ರಜ್ಞೆಯ ಮೌಲ್ಯಗಳು ಮುಖ್ಯವೆಂದು ಹೇಳಲಾಗುತ್ತದೆ. ಈ ಆಧಾರದ ಮೇಲೆ ಆಸಕ್ತಿಗಳನ್ನು ತೃಪ್ತಿಕರವಾಗಿ ತಣಿಸುವುದು ಹಾಗೂ ಕಲಾ ಮೌಲ್ಯಗಳ ಬಗ್ಗೆ ತಿಳುವಳಿಕೆಯನ್ನು ಬೆಳಸಿಕೊಳ್ಳುವುದು ಮತ್ತು ಕಲಾ ಮೌಲ್ಯಗಳನ್ನು ಮೈಗೂಡಿಸಿಕೊಳ್ಳುವ ಆಕಾಂಕ್ಷೆ ಮೂಡಿಸುವುದು ಕಲೆಯ ಪ್ರಮುಖ ಶೈಕ್ಷಣಿಕ ಕಾರ್ಯ. ಕೊನೆಯದಾಗಿ, ಕಲೆಯ ಐದನೆಯ ಕಾರ್ಯವೆಂದರೆ ತಾಂತ್ರಿಕ ಸಾಮರ್ಥ್ಯವನ್ನು ಬೆಳೆಸುವುದು. ಕಲಾ ವಿದ್ಯಾರ್ಥಿಗೆ ಅರ್ಥಗರ್ಭಿತ ಮತ್ತು ಮಹತ್ವವಿರುವ ಚಿತ್ರಕಲೆ ಅಥವಾ ಸಂಗೀತ ಅಥವಾ

ಇನ್ನ್ಯಾವುದಾದರೂ ಕಲಾಪ್ರಕಾರವು ಕೌಶಲ ಗಳಿಸುವ ದಾರಿಯಾಗಬೇಕು.  ಒಂದು ವಿಷಯದ ಕಾರ್ಯಗಳ ಹೇಳಿಕೆಗಳ ಮೂಲಕ ಸಾಕಷ್ಟು ಶೈಕ್ಷಣಿಕ ಧ್ಯೇಯೋದ್ದೇಶಗಳಿಗೆ ಸಲಹೆ ಪಡೆಯಬಹುದು ಎನ್ನುವ ಚಿಂತನೆಗೆ ಈ ಕಲಾ ವರದಿಗಳು ಮತ್ತೊಂದು ಒಳ್ಳೆಯ ಉದಾಹರಣೆ.

ವಿಷಯ ತಜ್ಞರ ವರದಿಗಳಿಂದ ಇನ್ನೊಂದು ರೀತಿಯ ಸಲಹೆಗಳನ್ನು ಪಡೆಯಬಹುದು. ಒಂದು ವಿಷಯದ ಕೆಲವು ಕಾರ್ಯಗಳು ಮಹತ್ವದ ಶೈಕ್ಷಣಿಕ ಕಾರ್ಯಗಳಿಗೆ ನಿರ್ದಿಷ್ಟ ಕೊಡುಗೆಗಳನ್ನು ನೀಡಲು ಸಾಧ್ಯವಿದೆ.  ಆದರೆ ಇದು, ಆ ಒಂದು ವಿಷಯದ ವಿಶಿಷ್ಟ ಅಥವಾ ಅನನ್ಯ ಕಾರ್ಯ ಎಂದು ಯೋಚಿಸದೆಯೂ ಇರಬಹುದು. ಈ ರೀತಿಯ ಸಲಹೆಗಳಿಗೆ ಸಾಮಾನ್ಯ ಶಿಕ್ಷಣದಲ್ಲಿ ವಿಜ್ಞಾನ ಸಮಿತಿಯ ವರದಿಯು (*The Report of the Committee on Science in General Education)* ಬಹಳ ಒಳ್ಳೆಯ ಉದಾಹರಣೆ.  ಮಾನವ ಸಂಬಂಧಗಳ ಪ್ರತೀ ಕ್ಷೇತ್ರದಲ್ಲಿಯೂ ವಿಜ್ಞಾನವು ನೀಡಬಹುದಾದ ಕೊಡುಗೆಗಳನ್ನು ಆಧರಿಸಿ ಈ ವರದಿಯನ್ನು ಸಂಯೋಜಿಸಲಾಗಿದೆ. ಉದಾಹರಣೆಗೆ, ವೈಯಕ್ತಿಕ ಆರೋಗ್ಯ, ಆತ್ಮವಿಶ್ವಾಸದ ಅಗತ್ಯ, ಅರ್ಥಪೂರ್ಣವಾದ ಜಗತ್ತಿನ ಚಿತ್ರಣ, ವೈಯಕ್ತಿಕ ಆಸಕ್ತಿಗಳ ಹರವು ಮತ್ತು ಸೌಂದರ್ಯಪ್ರಜ್ಞೆಯ ಆಸ್ವಾದನೆಯಂತಹ ಮಾನವ ಜೀವನಕ್ಕೆ ಸಂಬಂಧಿಸಿದ ವಿಷಯಗಳಿಗೆ ವಿಜ್ಞಾನ ಯಾವ ರೀತಿಯ ಕೊಡುಗೆಗಳನ್ನು ನೀಡಬಹುದು ಎನ್ನುವುದಕ್ಕೆ ಸಲಹೆಗಳನ್ನು ಈ ವರದಿಯಲ್ಲಿ ಕೊಟ್ಟಿರುತ್ತದೆ. ಇದೇ ರೀತಿ ವೈಯಕ್ತಿಕ-ಸಾಮಾಜಿಕ ಸಂಬಂಧಗಳಲ್ಲಿ, ವಿದ್ಯಾರ್ಥಿಗಳು ಮನೆ ಮತ್ತು ಕೌಟುಂಬಿಕ ಜೀವನದಲ್ಲಿ ಮತ್ತು ಮನೆಯ ಹೊರಗಿನ ವಯಸ್ಕರೊಡನೆ ಪ್ರಬುದ್ಧ ಸಂಬಂಧಗಳನ್ನು ನಿಭಾಯಿಸುವುದಕ್ಕೆ ಹಾಗೂ ಎರಡೂ ಲಿಂಗಗಳ ಸಹವರ್ತಿಗಳೊಡನೆ ಹೆಚ್ಚು ಹೆಚ್ಚು ಪ್ರಬುದ್ಧ ಮತ್ತು ಸಫಲ ಸಂಬಂಧಗಳನ್ನು ರೂಪಿಸಿಕೊಳ್ಳಲು ಇರುವ ಅಗತ್ಯಗಳಿಗೆ ವಿಜ್ಞಾನ ಸಹಕಾರ ನೀಡಬಲ್ಲ ಮಾರ್ಗಗಳ ಕುರಿತು ಸಲಹೆಗಳನ್ನು ನೀಡಿದ್ದಾರೆ. ಸಾಮಾಜಿಕ-ಪೌರ (social-civic) ಸಂಬಂಧಗಳ ಮಟ್ಟಿಗೆ ಸಾಮಾಜಿಕ ಮಹತ್ವವುಳ್ಳ ಚಟುವಟಿಕೆಗಳಲ್ಲಿ ಜವಾಬ್ದಾರಿಯುತ ಭಾಗವಹಿಸುವಿಕೆ ಮತ್ತು ಸಾಮಾಜಿಕ ಮನ್ನಣೆ ಪಡೆಯುವ ಅಗತ್ಯಗಳಿಗೆ ವಿಜ್ಞಾನ ಯಾವ ರೀತಿ ಸಹಾಯ ನೀಡಬಹುದು ಎನ್ನುವುದಕ್ಕೆ ಸಲಹೆಗಳನ್ನುಕೊಟ್ಟಿರುತ್ತದೆ. ಆರ್ಥಿಕ ಸಂಬಂಧಗಳ ಕ್ಷೇತ್ರದಲ್ಲಿ ವಯಸ್ಕರಾಗುವ ಹಂತದಲ್ಲಿ ಭಾವನಾತ್ಮಕ ಭರವಸೆಯ ಅಗತ್ಯ, ವೃತ್ತಿಯ ಆಯ್ಕೆ ಮತ್ತು ಔದ್ಯೋಗಿಕ ಸಿದ್ಧತೆಯ ಆಗತ್ಯ, ಸರಕು ಮತ್ತು ಸೇವೆಗಳನ್ನು ವಿವೇಕದಿಂದ ಆಯ್ಕೆ ಮಾಡಿ ಬಳಸುವ ಅಗತ್ಯ, ಆರ್ಥಿಕ ಸಮಸ್ಯೆಗಳನ್ನು ಪರಿಹರಿಸಲು ಪರಿಣಾಮಕಾರೀ ಕ್ರಮಗಳ ಅಗತ್ಯವನ್ನು ಪೂರೈಸಲು ವಿಜ್ಞಾನ ಯಾವ ರೀತಿಯಲ್ಲಿ ಸಹಾಯ ಮಾಡಬಹುದು ಎನ್ನುವುದಕ್ಕೆ ಸಲಹೆಗಳನ್ನು ನೀಡಿರುತ್ತದೆ.

ಸೈನ್ಸ್ ಇನ್ ಜೆನೆರಲ್ ಎಡ್ಯುಕೇಶನ್ (*Science in General Education* (ಸಾಮಾನ್ಯ ಶಿಕ್ಷಣದಲ್ಲಿ ವಿಜ್ಞಾನ)) ಸಂಪುಟವು ಮುಂದೆ ಈ ವಿಚಾರಗಳನ್ನು ವಿಸ್ತರಿಸುತ್ತಾ ಚಿಂತನ ಶೀಲತೆಯನ್ನು (reflective thinking) ಪ್ರೋತ್ಸಾಹಿಸಲು ಮತ್ತು ಒಳ್ಳೆಯ ವ್ಯಕ್ತಿತ್ವದ ಇತರ ಗುಣಗಳಾದ

ಸೃಜನಾತ್ಮಕ ಚಿಂತನೆ,ಸೌಂದರ್ಯದ ಮೆಚ್ಚುಗೆ, ಸಹಿಷ್ಣುತೆ, ಸಾಮಾಜಿಕ ಸಂವೇದನೆ, ಸ್ವಾಯತ್ತತೆಯನ್ನು (self-direction) ಬೆಳಸಿಕೊಳ್ಳಲು ವಿಜ್ಞಾನವನ್ನು ಬೋಧಿಸುವ ಮಾರ್ಗಗಳ ಕುರಿತು ತಿಳಿಸಿಕೊಡುತ್ತದೆ. ಇದರಲ್ಲಿ ಅನೇಕ ಅಂಶಗಳಿಗೆ ವಿಜ್ಞಾನದ ಕೊಡುಗೆಯ ಆಳ ಅಳತೆಯನ್ನು ವಿಮರ್ಶಕರು ಪ್ರಶ್ನಿಸಿದ್ದಾರೆ. ಆದಾಗ್ಯೂ, ಶಾಲೆ ಅಪೇಕ್ಷಿಸಬಹುದಾದ ಗುರಿಗಳಿಗಾಗಿ ಧ್ಯೇಯೋದ್ದೇಶಗಳನ್ನು ಸೂಚಿಸಲು ಈ ಸಲಹೆಗಳು ಉಪಯುಕ್ತವಾಗುತ್ತವೆ ಎನ್ನುವುದು ಸ್ಪಷ್ಟವಾಗಿ ಕಾಣಿಸುತ್ತದೆ. ಈ ಧ್ಯೇಯೋದ್ದೇಶಗಳ ಸಾಧನೆಗೆ ವಿಜ್ಞಾನ ಅಥವಾ ಇತರ ಕ್ಷೇತ್ರಗಳನ್ನು ಬಳಸಲು ಸಾಧ್ಯವಿದೆ.

ಇದೇ ರೀತಿ ಮಿಕ್ಕ ವಿಷಯ ಗುಂಪುಗಳೂ ಸಹ ಅದರದೇ ವಿಶಿಷ್ಟ ಹೊಣೆಗಾರಿಕೆ ಇಲ್ಲದಿರುವ ಆದರೆ ಅದೇ ವಿಷಯ ಅನ್ಯ ಕ್ಷೇತ್ರಗಳಲ್ಲಿ ನಿರ್ದಿಷ್ಟ ಕೊಡುಗೆ ನೀಡಬಲ್ಲ ವಿಷಯಗಳ ಕುರಿತಾದ ಸಲಹೆಗಳನ್ನು ಪ್ರಸ್ತಾಪಿಸಿದ್ದಾರೆ. ವಿಷಯ ತಜ್ಞರು ವಿಷಯದ ಮಹತ್ವದ ಕಾರ್ಯ ಎಂದು ಗುರುತಿಸುವ ಮತ್ತು ವಿಷಯವು ಇತರ ಮಹತ್ವದ ಕಾರ್ಯಗಳಿಗೆ ನೀಡಬಹುದಾದ ಹೆಚ್ಚು ನಿರ್ದಿಷ್ಟ ಕೊಡುಗೆಗಳನ್ನು ಉಲ್ಲೇಖಿಸಿರುವ ಇಂತಹ ವಿಷಯ ತಜ್ಞರ ವರದಿಗಳಿಂದ ನಿರ್ಣಯಗಳನ್ನು ತೆಗೆದುಕೊಂಡು ಅದರ ಮೂಲಕ ನಾವು ಧ್ಯೇಯೋದ್ದೇಶಗಳನ್ನು ಪಡೆಯಬಹುದು.

ಈ ವರದಿಗಳಿಂದ ಒಂದು ರೀತಿಯ ಅನುಭವ ಸಿಗುವ ಸಲುವಾಗಿ ಈ ರೀತಿಯ ಒಂದಾದರೂ ವರದಿಯನ್ನು ನೀವೂ ಓದಬೇಕೆಂಬುದು ನನ್ನ ಸಲಹೆ. ನಿಮ್ಮ ಆಸಕ್ತಿಗೆ ಅನುಗುಣವಾದ ಒಂದು ವಿಷಯದ ವರದಿಯನ್ನು ಓದಿ, ಅದರಲ್ಲಿ ಸಮಿತಿಯು ಆ ವಿಷಯ ಯಾವ ಮಹತ್ವದ ಕೊಡುಗೆ ನೀಡಬಹುದು ಮತ್ತು ಶೈಕ್ಷಣಿಕ ಕಾರ್ಯಗಳಿಗೆ ಯಾವ ನಿರ್ದಿಷ್ಟ ಕೊಡುಗೆಗಳನ್ನು ಕೊಡಬಹುದೆನ್ನುವುದರ ಕುರಿತಾಗಿ ನೀವು ಗ್ರಹಿಸಿದ್ದನ್ನು ಬರೆದಿಟ್ಟುಕೊಳ್ಳಿ. ಈ ಹೇಳಿಕೆಗಳನ್ನು ಆಧರಿಸಿದ ನಿರ್ಧಾರಗಳನ್ನು ನೀವು ತೆಗೆದುಕೊಂಡು ಒಂದು ಶೈಕ್ಷಣಿಕ ಧ್ಯೇಯೋದ್ದೇಶಗಳ ಪಟ್ಟಿಯನ್ನು ತಯಾರಿಸಿ. ಇದರ ಮೂಲಕ ವಿವಿಧ ವಿಷಯ ಗುಂಪುಗಳು ತಯಾರಿಸುತ್ತಿರುವ ವರದಿಗಳ ಸಲಹೆಗಳಿಂದ ಬರಬಹುದಾದ ಹಲವು ವಿಧವಾದ ಧ್ಯೇಯೋದ್ದೇಶಗಳ ಕಲ್ಪನೆ ನಿಮ್ಮಲ್ಲಿ ಮೂಡುವುದು.

ಅನುವಾದ: ಬೃಂದಾ ಯು ರಾವ್
ಪರಿಶೀಲನೆ: ಚೈತನ್ಯ ಅಸೋಸಿಯೇಟ್ಸ್

**Source: THE CURRICULUM STUDIES READER,**
**Editors David J. Flinders and Stephen J, Thornton; RoutledgeFalmer, 2004**

ಮೂಲ: ಪಠ್ಯಕ್ರಮ ಅಧ್ಯಯನದ ಪಾಠಪುಸ್ತಕ,
ಸಂಪಾದಕರು ಡೇವಿಡ್ ಜೆ. ಫ್ಲಿಂಡರ್ಸ್ ಮತ್ತು ಸ್ಟೀಫನ್ ಜೆ. ಥಾರ್ಟನ್,
ರುಟ್ಲೆಡ್ಜೆಫಮರ್,2004